**ST ALOYSIUS**

**(DEEMED TO BE UNIVERSITY)**

**MANGALURU, KARNATAKA 575003 - INDIA**

ESTD : 1880

# NEWS CLIPPINGS

## 16-08-2025 TO 31-08-2025

*Vijayavani 17-08-2025*

**ಡಾ.ಈಶ್ವರ ಭಟ್ ಎಸ್.ಅಭಿಮತ**

# ಸಾಧನೆಯಿಂದ ದೇಶ ಸದೃಢ



**ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಕ್ಸೇವಿಯರ್ ಬ್ಲಾಕ್‌ನ ನಿರ್ದೇಶಕ ಡಾ.ಈಶ್ವರ ಭಟ್, ವಿ.ವಿ.ಯ ಕುಲಪತಿ ಡಾ. ಪ್ರವೀಣ್ ಮಾರ್ಟಿಸ್, ವಿದ್ಯಾರ್ಥಿ ಕೆ.ಸಿ.ಕೃಷ್ಣ ಮೊದಲಾದವರು ಇದ್ದರು.**

**■ ವಿಜಯವಾಣಿ ಸುದ್ದಿಜಾಲ ಮಂಗಳೂರು**

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಕ್ಸೇವಿಯರ್ ಬ್ಲಾಕ್‌ನ ನಿರ್ದೇಶಕ ಡಾ.ಈಶ್ವರ ಭಟ್ ಎಸ್. ಧ್ವಜಾರೋಹಣ ನೆರವೇರಿಸಿದರು. ಭಾರತ ಇಂದು ಅಭಿವೃದ್ಧಿಯ ಕಡೆಗೆ ಸಾಗಿದ್ದು ವೈಜ್ಞಾನಿಕವಾಗಿ ಅನೇಕ ಸಾಧನೆಗಳನ್ನು ನಡೆಸುವುದರ ಮೂಲಕ ಸದೃಢವಾಗಿದೆ. ಸಾಂಸ್ಕೃತಿಕ ಪರಂಪರೆ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲೂ ಸಾಕಷ್ಟು ಮುನ್ನಡೆ ಸಾಧಿಸಿದೆ ಎಂದು ಅವರು ಹೇಳಿದರು. ವಿ.ವಿ.ಯ ಕುಲಪತಿ ಡಾ. ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕೆ.ಸಿ. ಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

*Vijayavani 18-08-2025*

## ಶೈಕ್ಷಣಿಕ ಸಹಯೋಗ, ಅಂತರ್‌ಶಿಸ್ತೀಯ ಸಂಶೋಧನೆ ಒಡಂಬಡಿಕೆ

# ಅಲೋಶಿಯಸ್-ಫಾ.ಮುಲ್ಲರ್ ಒಪ್ಪಂದ




ಮಹತ್ವದ ಒಪ್ಪಂದವೊಂದಕ್ಕೆ ಸೇಂಟ್ ಅಲೋಶಿಯಸ್ ಘೋಷಿತ ವಿಶ್ವವಿದ್ಯಾಲಯದ ಎಐಎಟಿ ಕೇಂದ್ರದ ನಿರ್ದೇಶಕ ಡಾ. ಕಿರಣ್ ಕೋತಾ ಎಸ್.ಜೆ. ಹಾಗೂ ಫಾದರ್ ಮುಲ್ಲರ್ ಸಂಸ್ಥೆಗಳ ನಿರ್ದೇಶಕ ರೆ.ಫಾ.ಫಾವೊಸ್ತಿನ್ ಲುಕಾಸ್ ಲೋಬೊ ಸಹಿ ಹಾಕಿದರು.

**ಮಂಗಳೂರು:** ಶೈಕ್ಷಣಿಕ ಸಹಯೋಗ ಮತ್ತು ಅಂತರ್‌ಶಿಸ್ತೀಯ ಸಂಶೋಧನೆಯನ್ನು ಮುನ್ನಡೆಸುವ ದಿಶೆಯಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟುಕೊಂಡು, ಸೇಂಟ್ ಅಲೋಶಿಯಸ್ ಘೋಷಿತ ವಿಶ್ವವಿದ್ಯಾಲಯ ಮಂಗಳೂರು ಮತ್ತು ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜು ಒಪ್ಪಂದಕ್ಕೆ ಸಹಿ ಹಾಕಿವೆ.

ಫಾದರ್ ಮುಲ್ಲರ್ ಸಂಸ್ಥೆಗಳ ನಿರ್ದೇಶಕ ರೆ.ಫಾ. ಫಾವೊಸ್ತಿನ್ ಲುಕಾಸ್ ಲೋಬೊ ಮತ್ತು ಸೇಂಟ್ ಅಲೋಶಿಯಸ್ ಘೋಷಿತ ವಿಶ್ವವಿದ್ಯಾಲಯದ ಎಐಎಟಿ ಕೇಂದ್ರದ ನಿರ್ದೇಶಕ ಡಾ.ಕಿರಣ್ ಕೋತಾ ಎಸ್.ಜೆ. ಅವರು ಸಹಿ ಹಾಕಿದ್ದಾರೆ.

ಹೊಸತನವನ್ನು ಉತ್ತೇಜಿಸುವುದು, ಸಹಯೋಗಿ ಸಂಶೋಧನೆಯನ್ನು ಉತ್ತೇಜಿಸುವುದು ಮತ್ತು ವಿವಿಧ ಶಿಸ್ತುಗಳಲ್ಲಿ ಶೈಕ್ಷಣಿಕ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುವುದು ಎಂಬ ಎರಡೂ ಸಂಸ್ಥೆಗಳ ಸಾಮಾನ್ಯ ದೃಷ್ಟಿಕೋನವನ್ನು ಈ ಪಾಲುದಾರಿಕೆ ಪ್ರತಿಬಿಂಬಿಸುತ್ತದೆ.

ಈ ಒಪ್ಪಂದದ ಸಂಘಟನೆಯನ್ನು ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಸಂಶೋಧನಾ ಮುಖ್ಯಸ್ಥ ಡಾ.ರಮೇಶ್ ಭಟ್ ಮತ್ತು ಸೇಂಟ್ ಅಲೋಶಿಯಸ್ ಘೋಷಿತ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಶಾಲೆಯ ಡೀನ್ ಮತ್ತು ಸಹಾಯಕ ಪ್ರಾಧ್ಯಾಪಕ ಡಾ.ಎಸ್.ರೂಬನ್ ನೇತೃತ್ವ ವಹಿಸಿದ್ದಾರೆ. ಸಂಸ್ಥಾಪಕ ಪಾಲುದಾರಿಕೆಗಳನ್ನು ಬಲಪಡಿಸುವಲ್ಲಿ ಇವರಿಗೆ ಸೇಂಟ್ ಅಲೋಶಿಯಸ್ ಘೋಷಿತ ವಿಶ್ವವಿದ್ಯಾಲಯದ ಅಂತಾರಾಷ್ಟ್ರೀಯ ಮತ್ತು ದೇಶೀಯ ಸಂಬಂಧಗಳ ಅಧ್ಯಕ್ಷ ರೋಶನ್ ಫ್ರೆಡ್ರಿಕ್ ಡಿಸೋಜ ನೆರವು ನೀಡಿದ್ದಾರೆ.

*Deccan Herald 17-08-2025*

# FMMC inks pact with St Aloysius for academic and research collaboration

MANGALURU, DHNS

In a step towards advancing academic collaboration and interdisciplinary research, the St Aloysius Deemed-to-be-University, Mangaluru, and the Father Muller Medical College, have signed a Memorandum of Understanding (MoU).

The MoU was signed by Rev Fr Faustine Lucas Lobo, Director of Father Muller Institutions, and Dr Kiran Cotha, Director of the AIMIT Centre, St Aloysius Deemed to be University.

The partnership reflects the shared vision of both the institutions to foster innovation, promote collaborative research, and enhance academic engagement across disciplines.

The coordination of the MoU was led by Dr Ramesh Bhat, the Head of Research at the Father Muller Medical College, and Dr S Ruban, Associate Professor and Dean of the School of Engineering, St Aloysius Deemed-to-be-University.




**Rev Fr Faustine Lucas Lobo, Director, Father Muller Institutions, and Dr Kiran Cotha, Director, AIMIT Centre, St Aloysius Deemed-to-be-University, exchange the memorandum of understanding.**

The MoU aims to facilitate joint initiatives, such as collaborative research projects, interdisciplinary workshops, training programs, and academic exchanges, creating a platform for knowledge sharing and mutual growth.

Both the institutions expressed their enthusiasm for the opportunities the collaboration would bring to faculty and students, emphasizing the importance of working together to address contemporary challenges in healthcare, technology, and society at large.

*Indian Express 18-08-2025*




Director of Father Muller Institutions Fr Faustine Lucas Lobo and Director of the AIMIT Centre Dr (Fr) Kiran Cotha SJ exchange MoU documents in Mangaluru | EXPRESS

# St Aloysius deemed-to-be varsity, Father Muller Medical College sign MoU

**EXPRESS NEWS SERVICE** @ Mangaluru

ST Aloysius Deemed to-be University and Father Muller Medical College signed a Memorandum of Understanding (MoU) on August 8 towards advancing academic collaboration and interdisciplinary research.

The MoU was signed by Fr Faustine Lucas Lobo, Director of Father Muller Institutions, and Dr (Fr) Kiran Cotha SJ, Director of the AIMIT Centre, St Aloysius Deemed to-be University. A release said the partnership reflects the shared vision of both institutions to foster innovation, promote collaborative research, and enhance academic engagement across disciplines.

This MoU aims to facilitate joint initiatives such as collaborative research projects, interdisciplinary workshops, training programs, and academic exchanges, creating a platform for knowledge sharing and mutual growth. Both institutions have expressed their enthusiasm for the opportunities this collaboration will bring to faculty and students, insisting on the importance of working together to address contemporary challenges in healthcare, technology, and society at large, added the release.

Udayavani 20-08-2025

# ಅಲೋಶಿಯಸ್ ವಿವಿಯಲ್ಲಿ 'ಕಲೋತ್ಸವ 2025' ಉದ್ಘಾಟನೆ



**ಬಾವುಟಗುಡ್ಡೆ, ಆ. 19:** ಸಂತ ಅಲೋಶಿಯಸ್ ಪರಿಗಣಿತ ವಿವಿ ವಿದ್ಯಾರ್ಥಿ ಚಟುವಟಿಕೆ ಕೋಶದ ಆಶ್ರಯದಲ್ಲಿ 'ಕಲೋತ್ಸವ 2025' ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ವಿವಿಯ ಎಲ್.ಎಫ್. ರಸ್ಕಿನ್ಹಾ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ನಟಿ ಹಿತ್ನಾ ರಾವ್ ಮಾತನಾಡಿದರು. ಗಾನ ನೃತ್ಯ ಅಕಾಡೆಮಿಯ ಸಂಸ್ಥಾಪಕಿ ವಿದುಷಿ ವಿದ್ಯಾಶ್ರೀ ರಾಧಾಕೃಷ್ಣ ಕಲೆ ಮತ್ತು ಸಂಸ್ಕೃತಿಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಂತೆ ಪ್ರೇರೇಪಿಸಿದರು.

ಅಲೋಶಿಯಸ್ ವಿವಿಯ ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು. ಸಹಕುಲಪತಿ ವಂ ।ಡಾ। ಮೆಲ್ವಿನ್ ಡಿ.ಕುನ್ಹಾ, ಕುಲಸಚಿವ ಡಾ। ಆಲ್ವಿನ್ ಡೇಸಾ, ಕುಲಪತಿ ಡಾ। ರೊನಾಲ್ಡ್ ನಜರೆತ್, ಸಾಂಸ್ಕೃತಿಕ ಕಾರ್ಯದರ್ಶಿ ಶ್ರಾವಣಿ ಭಟ್, ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷ ಆಸ್ಟನ್ ರೇಗೊ ಇದ್ದರು.

ಸ್ಟೂಡೆಂಟ್ ಎಂಗೇಜ್‌ಮೆಂಟ್ ಸೆಲ್‌ನ ಅಧ್ಯಕ್ಷ ನವೀನ್ ಮಸ್ಕರೇನ್ಹಸ್ ಸ್ವಾಗತಿಸಿ, ಕಾರ್ಯಕ್ರಮದ ಸಂಚಾಲಕಿ ಸಹನಾ ದೇವಾಡಿಗ ವಂದಿಸಿದರು. ರೆನಿಶಾ ಪಿಂಟೊ ನಿರೂಪಿಸಿದರು.

Times of India 18-08-2025

# Filmmaker urges students to pursue dreams with discipline

**Mangaluru:** Filmmaker Sneha Shetty Kohli said, "If you truly want something and work relentlessly for it, it will happen." She urged students to fully commit to their dreams. "Those sleepless nights and hard work give you wings," she said at a national-level seminar on "Lights, Camera, and Entrepreneurship" at Robert Sequeira Hall.

The event was organised by department of media studies at St Aloysius (Deemed to be) University, in collaboration with Saltsnap. Sneha emphasised the importance of teamwork, encouraging young professionals to support one another and grow collectively. She noted the encouraging shift in gender dynamics within the industry, pointing out that women are increasingly recognised for their talent and leadership.

Sneha, has more than 18 years of experience in Bollywood, and is recognised for her versatility across action, romance, and comedy. In a conversation moderated by Letitia D'Costa, PR associate and psychologist, Sneha reflected on her journey, from a childhood fascination with cameras to becoming a successful director. She advised students to begin small, even with phone cameras, and to share their work publicly. "Creativity often flourishes when resources are limited," she remarked. TNN

Prajavani 20-08-2025

# ಎಐ: ಕನ್ನಡಕ್ಕೂ ಅವಕಾಶಗಳ ಮಹಾಪೂರ

## ಸೇಂಟ್ ಅಲೋಶಿಯಸ್: 'ಪೊಸ ಒಸರ್' ಅಂತರರಾಜ್ಯ ಸಾಂಸ್ಕೃತಿಕ ಸಮಾವೇಶ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಕೃತಕ ಬುದ್ಧಿಮತ್ತೆ - ಈಚಿನ ಬೆಳವಣಿಗೆಗಳತ್ತ ಬೆಳಕು ಚೆಲ್ಲಿದ ಗೋಷ್ಠಿ
- ಎಐ ಪರಿಣಾಮಕಾರಿ ಬಳಕೆ-ವಿದ್ಯಾರ್ಥಿಗಳಿಗೆ ತರಬೇತಿ

ಮಂಗಳೂರು: ಯಂತ್ರ ಜಗತ್ತು ತಂದೊಡ್ಡಿರುವ ಸವಾಲನ್ನು ಭಾಷಿಕ ನೆಲೆಯಲ್ಲಿ ಎದುರಿಸುವುದು ಹೇಗೆ? ಜ್ಞಾನವನ್ನು ಮಾತೃಭಾಷೆಯಲ್ಲೇ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಹೇಗೆ? ಕೃತಕ ಬುದ್ಧಿಮತ್ತೆಯನ್ನು ಬಳಸಿ ಕನ್ನಡವನ್ನು ಅನ್ನದ ಭಾಷೆಯನ್ನಾಗಿಸುವುದು ಹೇಗೆ? ಇಂತಹ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನಕ್ಕೆ 'ಪೊಸ ಒಸರ್' (ಹೊಸ ಒರತೆ) ಅಂತರರಾಜ್ಯ ಸಾಂಸ್ಕೃತಿಕ ಸಮಾವೇಶ ವೇದಿಕೆ ಕಲ್ಪಿಸಿತು.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಪಿ.ಯು. ಕಾಲೇಜು ಕಲಾ ವಿದ್ಯಾರ್ಥಿಗಳಿಗಾಗಿ ಮಂಗಳವಾರ ಏರ್ಪಡಿಸಿದ್ದ ಈ ಸಮಾವೇಶವು, ಜನಜೀವನದಲ್ಲಿ ಯಂತ್ರ ಜಗತ್ತು ಆವರಿಸಿಕೊಳ್ಳುತ್ತಿರುವ ಪರಿಯನ್ನು ಪರಿಚಯಿಸಿತು.

'ಶಿಕ್ಷಣ ತಂತ್ರಜ್ಞಾನ: ಕೃತಕ ಬುದ್ಧಿಮತ್ತೆ ಜೊತೆ ಕನ್ನಡದ ಬೆಸುಗೆ' ಕುರಿತು ವಿಚಾರ ಮಂಡಿಸಿದ ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನ ವಿಭಾಗದ ಮುಖ್ಯಸ್ಥ ವಿನಯ್ ಎಂ., 'ಎಐ ತಂತ್ರಜ್ಞಾನದಿಂದಾಗಿ ಭಾಷೆಗಳ ನಡುವಿನ ಅಂತರ ಕಡಿಮೆಯಾಗಿದೆ. ಎಐ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಶೇ 60 ರಷ್ಟು ದತ್ತಾಂಶ ಕನ್ನಡದಲ್ಲೇ ಈಗ ಲಭ್ಯ. ಎಐ ಮೂಲಕ ಇಂಗ್ಲಿಷ್ ಭಾಷೆಯಲ್ಲಿ ಏನೆಲ್ಲ ಸಾಧ್ಯವಾಗುತ್ತಿದೆಯೋ ಅವುಗಳನ್ನು ಇನ್ನೊಂದು ವರ್ಷದೊಳಗೆ ಕನ್ನಡದಲ್ಲೂ ದಕ್ಕಿಸಿಕೊಳ್ಳಬಹುದು. ಈ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ನಮ್ಮ ನೆಲದ ಭಾಷೆಯನ್ನು ಉಳಿಸಿ ಬೆಳೆಸಬೇಕು' ಎಂದರು.

'ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ತಾಯ್ನುಡಿಯಲ್ಲೇ ಪರಿಣಾಮಕಾರಿಯಾಗಿ ಕಲಿಸುವುದಕ್ಕೆ ಎಐ ನೆರವಾಗಲಿದೆ. ಇಂಗ್ಲಿಷ್‌ನಲ್ಲಿ ಸಿಗುವ ಜ್ಞಾನವನ್ನು ಕನ್ನಡದ ಮೂಲಕ ಮಕ್ಕಳಿಗೆ ಚೆನ್ನಾಗಿ ಅರ್ಥ ಮಾಡಿಸುವುದಕ್ಕೆ ಶಿಕ್ಷಕರು ಎಐ ಅನ್ನು ದುಡಿಸಿಕೊಳ್ಳಬೇಕು. ಈ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ತರಬೇತಿ ನೀಡುವ ಅಗತ್ಯವಿದೆ' ಎಂದರು.

'ಸು ಫ್ರಂ ಸೋ' ಸಿನಿಮಾದ ನಟ ಪುಷ್ಪರಾಜ ಬೊಳ್ಳಾರ್ ಸಮಾವೇಶ ಉದ್ಘಾಟಿಸಿದದರು. 'ಸು ಫ್ರಂ ಸೋ' ಸಿನಿಮಾದಲ್ಲಿ ನಟಿಸಿರುವ ಸಂಸ್ಥೆಯ ವಿದ್ಯಾರ್ಥಿನಿ ಪ್ರಕೃತಿ ಅಮೀನ್ ಹಾಗೂ ಪುಷ್ಪರಾಜ ಬೊಳ್ಳಾರ್ ಅವರನ್ನು ಅಭಿನಂದಿಸಲಾಯಿತು.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಪ್ರವೀಣ್ ಮಾರ್ಟಿಸ್, ಜಪಾನ್ ಟೊಕಿಯೊದ ಸೋಫಿಯೊ ವಿಶ್ವವಿದ್ಯಾಲಯ ಸಹಾಯಕ ಪ್ರಾಧ್ಯಾಪಕ ಅರುಣ್ ಪ್ರಕಾಶ್ ಮಾತನಾಡಿದರು. ಕುಲಸಚಿವ ಆಲ್ವಿನ್ ಡೆಸಾ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ರೊನಾಲ್ಡ್ ನಜರೆತ್, ರೆಕ್ಟರ್ ಮೆಲ್ವಿನ್ ಜೋಸೆಫ್ ಪಿಂಟೊ, ಕನ್ನಡ ವಿಭಾಗದ ಮುಖ್ಯಸ್ಥ ಕೆ.ಮಹಾಲಿಂಗ ಭಟ್, ಕ್ರಿಸ್ಟೊಫರ್ ನೀನಾಸಂ ಭಾಗವಹಿಸಿದ್ದರು.

ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು. ಗುಳ್ಳೆಗಳನ್ನು ಹಾರಿ ಬಿಡುವ ಮೂಲಕ ಕಾರ್ಯಕ್ರಮವನ್ನು ಗಣ್ಯರು ವಿನೂತನವಾಗಿ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಪಿ.ಯು. ಕಾಲೇಜೊಂದರ ವಿದ್ಯಾರ್ಥಿನಿಯರು ಕೋಲಾಟ ನೃತ್ಯ ಪ್ರದರ್ಶಿಸಿದರು: ಪ್ರಜಾವಾಣಿ ಚಿತ್ರ

### ಕಳೆಗಟ್ಟಿದ ಸಾಂಸ್ಕೃತಿಕ ಲೋಕ

ಪದವಿ ಪೂರ್ವ ಕಾಲೇಜುಗಳ ಕಲಾ ವಿದ್ಯಾರ್ಥಿಗಳಿಗಾಗಿ ಸಮೂಹ ಗಾನ, ಸಮೂಹ ನೃತ್ಯ, ಫ್ಯಾಷನ್ ಶೋ ಸ್ಪರ್ಧೆಗಳಿಂದಾಗಿ ಸಮಾವೇಶದಲ್ಲಿ ಸಾಂಸ್ಕೃತಿಕ ಲೋಕ ಮೇಳೈಸಿತು. ಸಮೂಹ ನೃತ್ಯಗಳು ಒಂದಕ್ಕಿಂತ ಇನ್ನೊಂದು ಸೊಗಸಾಗಿ ಮೂಡಿಬಂದವು.

Udayavani 22-08-2025



**ಬಾವುಟಗುಡ್ಡೆ:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವು ಕಲಾ ವಿಭಾಗದ ಕನ್ನಡ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಅಂತರ್ ರಾಜ್ಯ ಸಾಂಸ್ಕೃತಿಕ ಸಮಾವೇಶದಲ್ಲಿ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

Udayavani 21-08-2025

# ಅಲೋಶಿಯಸ್ ವಿ.ವಿ.ಯಲ್ಲಿ ಪೊಸ ಒಸರ್ ಕಾರ್ಯಕ್ರಮ
## ವಿದ್ಯಾರ್ಥಿಗಳು ಸಾಧಿಸುವ ಛಲ ಮೈಗೂಡಿಸಿಕೊಳ್ಳಿ: ಪ್ರಕಾಶ್



**ಬಾವುಟಗುಡ್ಡೆ ಆ. 20:** ಸಂತ ಅಲೋಶಿಯಸ್ ಪರಿಗಣಿತ ವಿವಿಯ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕಾಯದ ಕನ್ನಡ ವಿಭಾಗದ ವತಿಯಿಂದ ಪ.ಪೂ.ಕಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ 'ಕನ್ನಡ ಸಾಂಸ್ಕೃತಿಕ ಲೋಕದೊಂದಿಗೆ ಯಾಂತ್ರಿಕ ಬುದ್ಧಿಮತ್ತೆಯ ಬೆಸುಗೆ: ಸಾಮಾಜಿಕತೆ ಮತ್ತು ಸೃಜನಶೀಲತೆಗಳ ಜಾಗತಿಕ ವಾಗ್ವಾದ' ಎಂಬ ಆಶಯದ ವಿಶೇಷ ಅಂತರ್ ರಾಜ್ಯ ಸಾಂಸ್ಕೃತಿಕ ಸಮಾವೇಶ ಮತ್ತು ಅಂತಾರಾಷ್ಟ್ರೀಯ ವಿಚಾರಸಂಕಿರಣ 'ಪೊಸ ಒಸರ್ 2025' ಕಾಲೇಜಿನ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಮಂಗಳವಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ನಟ ಪ್ರಕಾಶ್ ಬೋಳಾರ್ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಸಾಧಿಸುವ ಛಲವನ್ನು ಬೆಳೆಸಿಕೊಳ್ಳಿ, ಶಿಕ್ಷಣದೊಂದಿಗೆ ಸಂಗೀತ, ನೃತ್ಯ, ನಾಟಕದಂತಹ ಕಲೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಮಾತನಾಡಿದರು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠ ಹಾಗೂ ಸಹಕುಲಾಧಿಪತಿ ವಂ। ಮೆಲ್ವಿನ್ ಜೋಸೆಫ್ ಪಿಂಟೋ ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಕುಲಸಚಿವ ಡಾ। ಆಲ್ವಿನ್ ಡೇಸಾ, ವಿ.ವಿ.ಯ ಕುಲಸಚಿವ ಡಾ। ರೊನಾಲ್ಡ್ ನಜರೆತ್, ಆಡ್ಮಿನ್ ಬ್ಲಾಕ್‌ನ ನಿರ್ದೇಶಕ ಡಾ। ಚಾರ್ಲ್ಸ್ ಫುರ್ಟಾಡೊ, ಕನ್ನಡ ವಿಭಾಗ ಮುಖ್ಯಸ್ಥ ಡಾ। ಮಹಾಲಿಂಗ ಭಟ್, ಸಮಾವೇಶ ಸಂಯೋಜಕ ಕ್ರಿಸ್ಟೋಫರ್ ಡಿ'ಸೋಜಾ ಉಪಸ್ಥಿತರಿದ್ದರು.

ಜಪಾನಿನ ಟೋಕಿಯೋದ ಸೋಫಿಯಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕ ವಂ। ಡಾ। ಅರುಣ್ ಪ್ರಕಾಶ್ ದಿಕ್ರೂಜ್ ಭಾಷಣಗೈದು ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿದರು.

ಬೆಂಗಳೂರಿನ ಕ್ರೈಸ್ಟ್ ಪರಿಗಣಿತ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗ ಮತ್ತು ದತ್ತಸಂಚಯ ವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ ಡಾ। ವಿನಯ್ ಎಂ. ಸಂವಾದ ನಡೆಸಿದರು.

ಪಿಯುಸಿ ವಿದ್ಯಾರ್ಥಿಗಳಿಗಾಗಿ ಅಂತರ್ ರಾಜ್ಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿತು. ಉಳ್ಳಾಲದ ಭಾರತ್ ಪದವಿಪೂರ್ವ ಕಾಲೇಜು ರನ್ನರ್ ಅಪ್ ಪ್ರಶಸ್ತಿ ಗಳಿಸಿತು. ನಟ ಪ್ರಕಾಶ್ ಬೋಳಾರ್ ಹಾಗೂ ನಟಿ ಪ್ರಕೃತಿ ಅಮೀನ್ ಅವರನ್ನು ಸಮ್ಮಾನಿಸಲಾಯಿತು.

'ಕರಾವಳಿಯ ಗೋಲ್ಡನ್ ಗರ್ಲ್' ಖ್ಯಾತಿಯ ರೆಮೋನಾ ಇವೆಟ್ ಪಿರೇರಾ ಅವರಿಂದ ವಿನೂತನ ನೃತ್ಯಪ್ರದರ್ಶನ ನಡೆಯಿತು. ಡಾ। ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಡಾ। ಮಹಾಲಿಂಗ ಭಟ್ ವಂದಿಸಿದರು.

Varthabharathi 22-08-2025

# ಅಲೋಶಿಯಸ್ ವಿವಿಯಲ್ಲಿ 'ಪೊಸ ಒಸರ್' ವಿಚಾರ ಸಂಕಿರಣ



ಮಂಗಳೂರು, ಆ.21: ಸಂತ ಅಲೋಶಿಯಸ್ ಪರಿಗಣಿತ ವಿವಿಯ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕಾಯದ ಕನ್ನಡ ವಿಭಾಗದಿಂದ ಕನ್ನಡ ಸಾಂಸ್ಕೃತಿಕ ಲೋಕದೊಂದಿಗೆ ಯಾಂತ್ರಿಕ ಬುದ್ಧಿಮತ್ತೆಯ ಬೆಸುಗೆ: ಸಾಮಾಜಿಕತೆ ಮತ್ತು ಸೃಜನಶೀಲತೆಗಳ ಜಾಗತಿಕ ವಾಗ್ವಾದ ಎಂಬ ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣ 'ಪೊಸ ಒಸರ್ 2025' ಮಂಗಳವಾರ ಅಲೋಶಿಯಸ್ ವಿವಿಯ ಎಲ್‌ಸಿಆರ್‌ಐ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಚಿತ್ರನಟ ಪ್ರಕಾಶ್ ಬೋಳಾರ್ ಪಪೂ ಕಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠ ಹಾಗೂ ಸಹಕುಲಾಧಿಪತಿ ಫಾ.ಮೆಲ್ವಿನ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸಿದ್ದರು. ಸಂತ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿದರು.

ಜಪಾನಿನ ಟೋಕಿಯೋದ ಸೋಫಿಯಾ ವಿವಿಯ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಅರುಣ್ ಪ್ರಕಾಶ್ ಎಸ್.ಜೆ. ದಿಕ್ರೂಜ್ ಭಾಷಣ ಮಾಡಿದರು. ಬೆಂಗಳೂರಿನ ಕ್ರೈಸ್ಟ್ ಪರಿಗಣಿತ ವಿವಿಯ ಗಣಕ ವಿಜ್ಞಾನ ವಿಭಾಗ ಮತ್ತು ದತ್ತಸಂಚಯ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿನಯ್ ಎಂ. ಸಂವಾದ ನಡೆಸಿದರು.

ಈ ಸಂದರ್ಭ ಪಿಯುಸಿ ವಿದ್ಯಾರ್ಥಿಗಳಿಗಾಗಿ ಅಂತರ್ ರಾಜ್ಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಂತ ಅಲೋಶಿಯಸ್‌ನ ಪಪೂ ಕಾಲೇಜು ಸಮಗ್ರ ಪ್ರಶಸ್ತಿ ಗಳಿಸಿತು. ಉಳ್ಳಾಲದ ಭಾರತ್ ಪಪೂ ಕಾಲೇಜು ರನ್ನರ್ ಅಪ್ ಪ್ರಶಸ್ತಿ ಗಳಿಸಿತು. ಇದೇ ವೇಳೆ ಪ್ರಕಾಶ್ ಬೋಳಾರ್ ಹಾಗೂ ನಟಿ ಪ್ರಕೃತಿ ಅಮೀನ್ ರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕಾಲೇಜಿನ ಕುಲಸಚಿವ ಡಾ.ಆಲ್ವಿನ್ ಡೇಸಾ, ವಿವಿಯ ಕುಲಸಚಿವ ಡಾ.ರೊನಾಲ್ಡ್ ನಝ್ರೆತ್, ಆಡ್ಮಿನ್ ಬ್ಲಾಕ್‌ನ ನಿರ್ದೇಶಕ ಡಾ.ಚಾರ್ಲ್ಸ್ ಫುರ್ಟಾಡೊ, ಸಮಾವೇಶದ ಸಂಯೋಜಕ ಕ್ರಿಸ್ಟೋಫರ್ ಡಿಸೋಜ ಉಪಸ್ಥಿತರಿದ್ದರು.

ಡಾ.ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಮಹಾಲಿಂಗ ಭಟ್ ವಂದಿಸಿದರು. ಬಳಿಕ ರೆಮೋನಾ ಇವೆಟ್ ಪಿರೇರ ಅವರಿಂದ ನೃತ್ಯಪ್ರದರ್ಶನ ನಡೆಯಿತು.

Udayavani 22-08-2025

## ಕೊಂಕಣಿ ಮಾನ್ಯತಾ ದಿನಾಚರಣೆಯ ಸಮಾರೋಪ

# ಕೊಂಕಣಿ ಭಾಷೆ ವಿಶ್ವವ್ಯಾಪಿಯಾಗಿದೆ: ಪ್ರೊ| ಕಾಮತ್

**ಶಕ್ತಿನಗರ, ಆ. 21:** ರಾಜ್ಯಭಾಷೆ ಯಾವುದೇ ಒಂದು ರಾಜ್ಯಕ್ಕೆ ಸೀಮಿತವಾದರೆ ಕೊಂಕಣಿ ಇಡೀ ಕೊಂಕಣ ಪ್ರದೇಶಕ್ಕೆ ಅನ್ವಯಿಸುವ ಭಾಷೆ. ಸಾವಿರಾರು ಭಾಷೆ, ಉಪಭಾಷೆಗಳಿರುವ ಭಾರತದಲ್ಲಿ ಕೇವಲ 22 ಭಾಷೆಗಳಿಗೆ ಮಾತ್ರ ಅಧಿಕೃತ ಭಾಷೆಯ ಸ್ಥಾನಮಾನವಿದೆ. ಅದರಲ್ಲಿ ಕೊಂಕಣಿ ಒಂದು ಎಂಬ ಅಭಿಮಾನ ನಮ್ಮದು. ಹಲವಾರು ಕಠಿನ ನಿಬಂಧನೆಗಳನ್ನು ದಾಟಿ, ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಲು ನಮ್ಮ ಹಿರಿಯರು ಶ್ರಮಿಸಿದ್ದಾರೆ ಎಂದು ಪ್ರೊ| ಅರುಣಾ ಕಾಮತ್ ಹೇಳಿದರು.

ಶಕ್ತಿನಗರದ ಕಲಾಂಗಣದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಮಾಂಡ್ ಸೊಭಾಣ್ ಸಹಯೋಗದಲ್ಲಿ ಏರ್ಪಡಿಸಿದ 34ನೇ ಕೊಂಕಣಿ ಮಾನ್ಯತಾ ದಿನಾಚರಣೆಯ ಸಮಾರೋಪದಲ್ಲಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಕೊಂಕಣಿ ಕಲಿಕೆಗೆ, ಸ್ನಾತಕೋತ್ತರ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಅವಕಾಶವಿದೆ. ಅದನ್ನು ಬಳಸಬೇಕು. ಸಾಮಾಜಿಕ ಮಾಧ್ಯಮ ಹಾಗೂ ಅಂತರ್ಜಾಲದ ಪ್ರಭಾವ ಬಳಕೆಯ ಮುಖಾಂತರ ಕೊಂಕಣಿಯನ್ನು ವಿಶ್ವಸ್ತರಕ್ಕೆ ಕೊಂಡೊಯ್ಯಲು ಯುವಜನತೆ ಶ್ರಮಿಸಬೇಕು ಎಂದರು.



ಭರತನಾಟ್ಯದಲ್ಲಿ ವಿಶ್ವದಾಖಲೆ ನಿರ್ಮಿಸಿದ ರೆಮೊನ ಅವರನ್ನು ಸಮ್ಮಾನಿಸಲಾಯಿತು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್ ಮಾತನಾಡಿ, ಭಾರತದ ಮಾನ್ಯತೆ ಪಡೆದ ಅಧಿಕೃತ 22 ಭಾಷೆಗಳಲ್ಲಿ ಕೊಂಕಣಿಯೂ ಒಂದು. ಮಾನ್ಯತಾ ದಿನ ಆಚರಿಸುವ ಮೂಲಕ ಯುವಜನರು ಇದರಿಂದ ಸ್ಫೂರ್ತಿ ಪಡೆದುಕೊಳ್ಳಲಿದ್ದಾರೆ ಎಂದರು.

ಇತ್ತೀಚೆಗೆ ಭರತನಾಟ್ಯದಲ್ಲಿ ವಿಶ್ವದಾಖಲೆ ನಿರ್ಮಿಸಿದ ರೆಮೊನ ಇವೆಟ್ ಪಿರೇರಾ ಅವರನ್ನು ಸಮ್ಮಾನಿಸಲಾಯಿತು. ಸಮ್ಮಾನ ಪತ್ರವನ್ನು ಅಕಾಡೆಮಿ ಸದಸ್ಯ ಅಕ್ಷತಾ ನಾಯಕ್ ವಾಚಿಸಿದರು. ಅಕಾಡೆಮಿಯ ಮಾಜಿ ಅಧ್ಯಕ್ಷ ರೋಯ್ ಕ್ಯಾಸ್ತಲಿನೊ ಅವರ 'ಬಾಲ್ತಿ ಕೊಂಬ್ಯೆ' ಪುಸ್ತಕದ ಇ ಬುಕ್ ಆವೃತ್ತಿ ಬಿಡುಗಡೆಗೊಳಿಸಿದರು. ಪುಸ್ತಕದ ಬಗ್ಗೆ ಕೇರನ್ ಮಾಡ್ತಾ ಮಾಹಿತಿ ನೀಡಿದರು. ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ಶುಭಾಶೀರ್ವಾದರನ್ನು, ಇತ್ತೀಚೆಗೆ ಗುರು ಶ್ರೇಷ್ಠ ಗೌರವ ಪಡೆದ ಶಿಕ್ಷಕಿ, ಅಕಾಡೆಮಿ ಸದಸ್ಯೆ ಸಪ್ನಾ ಕ್ರಾಸ್ತಾ ಅವರನ್ನು ಗೌರವಿಸಿದರು. ಅಕಾಡೆಮಿ ಸದಸ್ಯ ನವೀನ್ ಲೋಬೋ, ರೊನಿ ಕ್ರಾಸ್ತಾ, ದಯಾನಂದ ಮಡೇಕರ್, ಪಾಲಿಕೆ ಮಾಜಿ ಕಾರ್ಪೋರೇಟರ್ ರಂಗನಾಥ ಕಿಣಿ ಉಪಸ್ಥಿತರಿದ್ದರು. ರಿಜಿಸ್ಟ್ರಾರ್ ರಾಜೇಶ್ ಜಿ. ವಂದಿಸಿದರು. ವನಿತಾ ಸಲ್ಡಾನ್ಹಾ ನಿರೂಪಿಸಿದರು.

**ವಿವಿಧ ಸ್ಪರ್ಧೆಗಳ ಫಲಿತಾಂಶ**

ಪ್ರೌಢಶಾಲಾ ವಿಭಾಗದಲ್ಲಿ ಕ್ರೈಸ್ಟ್ ಕಿಂಗ್ ಆಂಗ್ಲ ಮಾಧ್ಯಮ ಶಾಲೆ ಕಾರ್ಕಳ ಪ್ರಥಮ, ಮೌಂಟ್ ಕಾರ್ಮೆಲ್ ಸೆಂಟ್ರಲ್ ಸ್ಕೂಲ್ ದ್ವಿತೀಯ ಮತ್ತು ಹೋಲಿ ಫ್ಯಾಮಿಲಿ ಆಂಗ್ಲ ಮಾಧ್ಯಮ ಶಾಲೆ ತೃತೀಯ ಸ್ಥಾನ ಪಡೆದವು. ಕಾರ್ಯಕ್ರಮ ನಿರ್ವಹಣೆಯಲ್ಲಿ ಕ್ರೈಸ್ಟ್ ಕಿಂಗ್ ಶಾಲೆಯ ಲೆನಿಶಾ ಮೆಂಡೋನ್ಸಾ ಮತ್ತು ಸಾನ್ವಿ ಮಾರ್ಟಿಸ್ ಪ್ರಥಮ, ಮೌಂಟ್ ಕಾರ್ಮೆಲ್ ಶಾಲೆಯ ಅಲೋಮ ಲೋಬೊ ದ್ವಿತೀಯ ಹಾಗೂ ಕೆನರಾ ಪ್ರೌಢ ಶಾಲೆಯ ಜೀವಿತಾ ಕುಡ್ವಾ ತೃತೀಯ ಸ್ಥಾನ ಪಡೆದರು.

ಕಾಲೇಜು ವಿಭಾಗದಲ್ಲಿ ಸಂತ ಅಲೋಶಿಯಸ್ ಪಿಯು ಕಾಲೇಜು ಬಿ ತಂಡ ಪ್ರಥಮ, ಸಂತ ಎಲೋಶಿಯಸ್ ಪಿಯು ಕಾಲೇಜು ಎ ತಂಡ ದ್ವಿತೀಯ, ಕಾರ್ಮೆಲ್ ಪಿಯು ಕಾಲೇಜು ಮೊಡಂಕಾಪು ತೃತೀಯ ಸ್ಥಾನ ಪಡೆದರು. ಕಾರ್ಯಕ್ರಮ ನಿರ್ವಹಣೆಯಲ್ಲಿ ಸಂತ ಅಲೋಶಿಯಸ್ ಪಿಯು ಕಾಲೇಜಿನ ಲಿಸ್ಟನ್ ಕಾರ್ಲ್ ಪ್ರಥಮ, ಸಂತ ಎಲೋಶಿಯಸ್ ಪಿಯು ಕಾಲೇಜಿನ ಆಡ್ಲಿನ್ ಸಿಕ್ವೇರಾ ಮತ್ತು ಕೆನರಾ ಸಂಧ್ಯಾ ಕಾಲೇಜಿನ ಪಂಚಮಿ ಭಟ್ ದ್ವಿತೀಯ, ಸಂತ ಅಲೋಶಿಯಸ್ ಪರಿಗಣಿತ ವಿವಿಯ ಸಾನ್ನಿಯಾ ರೂತ್ ಡಿ.ಕುನ್ಹಾ ತೃತೀಯ ಸ್ಥಾನ ಪಡೆದರು. ವಿಕಾಸ್ ಕಲಾಕುಲ್ ಬಹುಮಾನಿತರ ವಿವರ ವಾಚಿಸಿದರು.

Udayavani 23-08-2025

## ▶ಅಲೋಶಿಯಸ್ ವಿವಿಯಲ್ಲಿ ಅಟಲ್ ಎಫ್.ಡಿ.ಪಿ. ಉದ್ಘಾಟನೆ

# ಎಐಗೆ ಹೊಂದಿಕೊಳ್ಳದಿದ್ದರೆ ಅಸ್ತಿತ್ವವೇ ಅಪಾಯ: ಡಾ| ಕಿರಣ್

**ಬಾವುಟಗುಡ್ಡೆ, ಆ. 22:** 'ತಂತ್ರಜ್ಞಾನ-ಕೊಯ್ಲು: ಸುಸ್ಥಿರ ಕೃಷಿಗಾಗಿ ಮುಂದುವರಿದ ಕಂಪ್ಯೂಟರ್ ವಿಜ್ಞಾನ ಮತ್ತು ಕೃಷಿ ಸಂಶೋಧನೆ' ಕುರಿತು ಎಐಸಿಟಿಇ ಪ್ರಾಯೋಜಿತ ಆರು ದಿನಗಳ ಅಟಲ್ ಫ್ಯಾಕಲ್ಟಿ ಅಭಿವೃದ್ಧಿ ಕಾರ್ಯಕ್ರಮ ಉದ್ಘಾಟನೆ ಸಾನಿಧ್ಯ ಸಭಾಂಗಣದಲ್ಲಿ ನಡೆಯಿತು.



ಅತಿಥಿ ಎಐಎಂಐಟಿ ನಿರ್ದೇಶಕ ರೆ| ಡಾ| ಕಿರಣ್ ಕೋತಾ ಅವರು ಕೃತಕ ಬುದ್ಧಿಮತ್ತೆ ಜಗತ್ತಿನಲ್ಲಿ ಸಂಪೂರ್ಣವಾಗಿ ಕ್ರಾಂತಿಕಾರಿ ಮತ್ತು ಆರ್ಥಿಕತೆಯನ್ನು, ವಿಶೇಷವಾಗಿ ಕೈಗಾರಿಕೆಗಳು ಮತ್ತು ಆರೋಗ್ಯ ವಲಯವನ್ನು ಹೇಗೆ ಅಸ್ತವ್ಯಸ್ತಗೊಳಿಸಿರುಬಹುದು ಕುರಿತು ಮಾತನಾಡಿ, ಶಿಕ್ಷಣ ಕ್ಷೇತ್ರವು ಇನ್ನೂ ಹಳೆಯ ಸಾಂಪ್ರದಾಯಿಕ ಕ್ರಮದಲ್ಲಿದೆ ಮತ್ತು ಶಿಕ್ಷಣ ಕ್ಷೇತ್ರವು ಎಐನ ಬದಲಾವಣೆಗಳಿಗೆ ಹೊಂದಿಕೊಳ್ಳದಿದ್ದರೆ, ಅದರ ಅಸ್ತಿತ್ವವೇ ಅಪಾಯದಲ್ಲಿದೆ ಎಂದರು.

ಅಲೋಶಿಯಸ್ ವಿವಿಯ ಪ್ರೊ-ವಿಸಿ ರೆ| ಡಾ| ಮೆಲ್ವಿನ್ ಡಿಕುನ್ಹಾ ಅಧ್ಯಕ್ಷತೆ ವಹಿಸಿ ಮಾತನಾಡಿ, 20ನೇ ಶತಮಾನದಲ್ಲಿ ಹಸಿರು ಕ್ರಾಂತಿಯು ಲಕ್ಷಾಂತರ ಜನರಿಗೆ ಜೀವನೋಪಾಯಕ್ಕಾಗಿ ಸಹಾಯ ಮಾಡಿದ ಹಿಂದಿನ ಇತಿಹಾಸವಾಗಿದೆ. ಹೆಚ್ಚಿನ ಮನೆಗಳಲ್ಲಿ ಉತ್ಪತ್ತಿಯಾಗುವ 5 ಟನ್‌ಗಳಿಗಿಂತ ಹೆಚ್ಚು ತ್ಯಾಜ್ಯವನ್ನು ನೈಸರ್ಗಿಕ ಅನಿಲವಾಗಿ ಪರಿವರ್ತಿಸಬಹುದು ಮತ್ತು ಅದನ್ನು ಆಟೋಗಳು ಮತ್ತು ಇತರ ವಾಹನಗಳು ಬಳಸಬಹುದು ಎಂದು ಹೇಳಿದರು.

ರಿಜಿಸ್ಟ್ರಾರ್, ಡಾ| ರೊನಾಲ್ಡ್ ನಜರೆತ್, ಅಡ್ಮಿನ್ ಬ್ಲಾಕ್‌ನ ನಿರ್ದೇಶಕ ಡಾ| ಚಾರ್ಲ್ಸ್ ಫರ್ಟಾಡೊ, ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಶಾಲೆಯ ಡೀನ್ ಡಾ| ಹೇಮಲತಾ ಎನ್. ಮತ್ತು ಕಾರ್ಯಕ್ರಮದ ಅಸೋಸಿಯೇಟ್ ಡೀನ್ ಮತ್ತು ಕೋ-ಆರ್ಡಿನೇಟರ್ ಡಾ| ರವೀಂದ್ರ ಸ್ವಾಮಿ ಉಪಸ್ಥಿತರಿದ್ದರು. ಡಾ| ಹೇಮಲತಾ ಎನ್. ಸ್ವಾಗತಿಸಿ, ಪ್ರೇಮಲತಾ ಶೆಟ್ಟಿ ನಿರೂಪಿಸಿದರು. ಡಾ| ರವೀಂದ್ರ ಸ್ವಾಮಿ ವಂದಿಸಿದರು.

*Varthabharathi 21-08-2025*

# ಅಲೋಶಿಯಸ್ ಕಾಲೇಜಿನಲ್ಲಿ ಕ್ಲಬ್‌ಗಳ ಉದ್ಘಾಟನೆ




ಮಂಗಳೂರು, ಆ.20: ಸಂತ ಅಲೋಶಿಯಸ್ ಪರಿಗಣಿತ ವಿವಿಯ ಸ್ಕೂಲ್ ಆಫ್ ಇಂಜಿನಿಯರಿಂಗ್ ವಿಭಾಗದಲ್ಲಿ ಕೋಡಿಂಗ್, ಐಒಟಿ, ಇನ್ನೋವೇಶನ್ ಮತ್ತು ಎಂಟರ್‌ಪ್ರಿನರ್‌ಶಿಪ್ ಎಂಬ 4 ವಿದ್ಯಾರ್ಥಿ ಕ್ಲಬ್‌ಗಳನ್ನು ಇತ್ತೀಚೆಗೆ ಉದ್ಘಾಟನೆಗೊಂಡಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಏರ್‌ಬಸ್ ಇಂಡಿಯಾದ ಭಾರತ ಮತ್ತು ದಕ್ಷಿಣ ಏಷ್ಯಾದ ಉಪಾಧ್ಯಕ್ಷ ಮತ್ತು ಮಾನವ ಸಂಪನ್ಮೂಲ ಮುಖ್ಯಸ್ಥ ಸೂರಜ್ ಚೆಟ್ರಿ ಕ್ಲಬ್‌ಗಳನ್ನು ಉದ್ಘಾಟಿಸಿದರು. ಎಐಎಂಐಟಿಯ ನಿರ್ದೇಶಕ ರೆ.ಡಾ. ಕಿರಣ್ ಕೋಥಾ ಎಸ್.ಜೆ. ಗೌರವ ಅತಿಥಿಯಾಗಿದ್ದರು. ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಉದ್ಯಮ ಶೀಲತಾ ಕ್ಲಬ್‌ನ ಅಧ್ಯಾಪಕ, ಸದಸ್ಯ, ಸಂಯೋಜಕ ಗ್ಲೆನ್ಸನ್ ಟೋನಿ ಕ್ಲಬ್‌ಗಳನ್ನು ಪರಿಚಯಿಸಿದರು. ಡಾ.ಗೀತಾ ಪಿಂಟೊ ಸ್ವಾಗತಿಸಿದರು. ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಡೀನ್ ಡಾ.ಎಸ್.ರೂಬನ್ ವಂದಿಸಿದರು.

*Vijayavani 20-08-2025*

### ಏರ್‌ಬಸ್ ಇಂಡಿಯಾದ ಉಪಾಧ್ಯಕ್ಷ ಸೂರಜ್ ಚೆಟ್ರಿ ಅಭಿಮತ

# ಪರರಿಗೆ ಕೊಡುವುದರಲ್ಲಿದೆ ಸಂತೋಷ




ಕ್ಲಬ್‌ಗಳ ಉದ್ಘಾಟನಾ ಸಮಾರಂಭದಲ್ಲಿ ಏರ್ ಬಸ್ ಇಂಡಿಯಾದ ಉಪಾಧ್ಯಕ್ಷ ಸೂರಜ್ ಚೆಟ್ರಿ, ಕುಲಪತಿ ಡಾ.ಪ್ರವೀಣ್ ಮಾರ್ಟಿಸ್, ಎಐಎಂಐಟಿಯ ನಿರ್ದೇಶಕ ಡಾ.ಕಿರಣ್ ಕೋಥಾ ಉಪಸ್ಥಿತರಿದ್ದರು.

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಕೋಡಿಂಗ್ ಕ್ಲಬ್, ಐಒಟಿ ಕ್ಲಬ್, ಇನ್ನೋವೇಶನ್ ಕ್ಲಬ್ ಮತ್ತು ಎಂಟರ್‌ಪ್ರಿನರ್‌ಶಿಪ್ ಕ್ಲಬ್‌ನ ಉದ್ಘಾಟನೆ ನಡೆಯಿತು.

ಉದ್ಘಾಟನೆ ನೆರವೇರಿಸಿದ ಏರ್‌ಬಸ್ ಇಂಡಿಯಾದ ಉಪಾಧ್ಯಕ್ಷ ಮತ್ತು ಮಾನವ ಸಂಪನ್ಮೂಲ ಮುಖ್ಯಸ್ಥ ಸೂರಜ್ ಚೆಟ್ರಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದ ಉದ್ದೇಶವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸ್ವೀಕರಿಸುವ ಬದಲು ಕೊಡುವುದರಲ್ಲಿ ಸಂತೋಷ ಕಂಡುಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿ, ಹೊಸದಾಗಿ ಪ್ರಾರಂಭಿಸಿದ ಕ್ಲಬ್‌ಗಳು ವಿದ್ಯಾರ್ಥಿಗಳಿಗೆ ಬದಲಾವಣೆ ತರಲು ಅಮೂಲ್ಯವಾದ ಅವಕಾಶ ಒದಗಿಸುತ್ತದೆ. ಈ ಚಟುವಟಿಕೆಗಳು ಸವಾಲುಗಳಿಗೆ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತವೆ ಎಂದರು.

ಎಐಎಂಐಟಿಯ ನಿರ್ದೇಶಕ ಡಾ.ಕಿರಣ್ ಕೋಥಾ ಮುಖ್ಯ ಅತಿಥಿಯಾಗಿದ್ದರು. ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಡೀನ್ ಡಾ.ಎಸ್.ರೂಬನ್ ಮೊದಲಾದವರು ಉಪಸ್ಥಿತರಿದ್ದರು. ಸಂಯೋಜಕ ಗ್ಲೆನ್ಸನ್ ಟೋನಿ ವಿವಿಧ ಕ್ಲಬ್‌ಗಳನ್ನು ಪರಿಚಯಿಸಿದರು. ಡಾ.ಗೀತಾ ಪಿಂಟೊ ಸ್ವಾಗತಿಸಿದರು.

*Udayavani 22-08-2025*

# ಆ. 25: ಅಲೋಶಿಯಸ್ ವಿ.ವಿ.ಯಲ್ಲಿ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ

**ಪತ್ರಿಕಾಭವನ, ಆ. 21:** ಸಂತ ಅಲೋಶಿಯಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ 'ಅಲೋಶಿನ್ ಫೆಸ್ಟ್ 2025' ಆ. 25ರಂದು ನಡೆಯಲಿದೆ ಎಂದು ವಿ.ವಿ. ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ತಿಳಿಸಿದ್ದಾರೆ.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೆಳಗ್ಗೆ 9ಕ್ಕೆ ಎಲ್ಸಿಆರ್ಐ ಬ್ಲಾಕ್‌ನ ಎಲ್‌ಎಫ್ ರಸ್ಕಿನಾ ಸಭಾಂಗಣದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ ಉತ್ಸವ ಉದ್ಘಾಟಿಸುವರು. ಹಿರಿಯ ವಿದ್ಯಾರ್ಥಿ, ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು. ಸಮಾರೋಪ ಅಪರಾಹ್ನ 3.30ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ವಿರ್ಘ್‌ಡೋಮ್ ಎಜುಕೇಶನ್ ಸ್ಥಾಪಕಿ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಡಾ। ಫ್ರಾನ್ಸಿಸ್ಕಾ ತೇಜ್ ಪಾಲ್ಗೊಳ್ಳುವರು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠಾಧಿಕಾರಿ ವಂ। ಮೆಲ್ವಿನ್ ಜೋಸೆಫ್ ಪಿಂಟೋ ಅಧ್ಯಕ್ಷತೆ ವಹಿಸುವರು. ವಿವಿಧ ಕಾಲೇಜುಗಳ 1,500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

'ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬ 2 ವಿಭಾಗಗಳಲ್ಲಿ ಉತ್ಸವ ಆಯೋಜಿಸಲಾಗುವುದು. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳು, ಸಾಂಸ್ಕೃತಿಕ ಹಬ್ಬದಲ್ಲಿ 5 ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದರು. ವಿ.ವಿ. ಕುಲಸಚಿವ ಡಾ। ಅಲ್ವಿನ್ ಡೇಸಾ, ಡಾ। ಭವ್ಯಾ ಶೆಟ್ಟಿ ಡಾ। ಸ್ಮಿತಾ ಡಿ.ಕೆ., ಆ್ಯನ್ಸನ್ ರೇಗೊ, ಶ್ರಾವಣ ಕೆ. ಭಟ್ ಉಪಸ್ಥಿತರಿದ್ದರು.

*Vijayakarnataka 22-08-2025*

# 25ರಂದು ರಾಷ್ಟ್ರೀಯ ಅಲೋಶಿಯನ್ ಫೆಸ್ಟ್

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ ಅಲೋಶಿಯನ್ ಫೆಸ್ಟ್ 2025 ಆ.25ರಂದು ಆಯೋಜಿಸಲಾಗಿದೆ.

ಬೆಳಗ್ಗೆ 9ಕ್ಕೆ ಎಲ್‌ಸಿಆರ್‌ಐ ಬ್ಲಾಕ್‌ನ ಎಲ್‌ಎಫ್ ರಸ್ಕಿನಾ ಸಭಾಂಗಣದಲ್ಲಿ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ ಉತ್ಸವ ಉದ್ಘಾಟಿಸಲಿದ್ದಾರೆ. ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಸಂಜೆ 3.30ಕ್ಕೆ ಸಮಾರೋಪ ನಡೆಯಲಿದ್ದು, ವಿರ್ಘ್‌ಡೋಮ್ ಎಜುಕೇಶನ್ ಸ್ಥಾಪಕಿ ಡಾ.ಫ್ರಾನ್ಸಿಸ್ಕಾ ತೇಜ್, ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಫಾದರ್ ಮೆಲ್ವಿನ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸುವರು ಎಂದರು.

'ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬಎರಡು ವಿಭಾಗಗಳಲ್ಲಿ ಉತ್ಸವ ಆಯೋಜಿಸಲಾಗುವುದು. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳು ನಡೆಯಲಿವೆ. ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ನಾನಾ ಕಾಲೇಜುಗಳ 1500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ, ಪ್ರತಿ ವೈಯಕ್ತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಸ್ತಿ ಪತ್ರ ಮತ್ತು ಫಲಕದೊಂದಿಗೆ ಗೌರವಿಸಲಾಗುವುದು. ಉತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ಫಲಕ ನೀಡಿ ಗೌರವಿಸಲಾಗುವುದು ಎಂದರು.

ವಿವಿ ಕುಲಸಚಿವ ಡಾ.ಆಲ್ವಿನ್ ಡೇಸ, ಭವ್ಯಾ ಶೆಟ್ಟಿ ಡಾ.ಸ್ಮಿತಾ ಡಿ.ಕೆ., ಆ್ಯನ್ಸನ್ ರೇಗೊ, ಶ್ರಾವಣಿ ಕೆ.ಭಟ್ ಉಪಸ್ಥಿತರಿದ್ದರು.

*Varthabharathi 22-08-2025*

# ಆ.25ರಂದು 'ಅಲೋಶಿನ್ ಫೆಸ್ಟ್ 2025'

ಮಂಗಳೂರು, ಆ. 21: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರ ಮಟ್ಟದ ಪ್ರತಿಭಾ ಉತ್ಸವ 'ಅಲೋಶಿನ್ ಫೆಸ್ಟ್-2025' ಆ.25ರಂದು ನಡೆಯಲಿದೆ.

ಬೆಳಗ್ಗೆ 9ಕ್ಕೆ ಎಲ್‌ಸಿಆರ್‌ಐ ಬ್ಲಾಕ್‌ನ ಎಲ್‌ಎಫ್ ರಸ್ಕಿನಾ ಸಭಾಂಗಣದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ ಉತ್ಸವ ಉದ್ಘಾಟಿಸುವರು. ಹಿರಿಯ ವಿದ್ಯಾರ್ಥಿ, ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು ಎಂದು ವಿವಿ ಕುಲಪತಿ ವಂ. ಡಾ.ಪ್ರವೀಣ್ ಮಾರ್ಟಿಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸಮಾರೋಪ ಸಮಾರಂಭ ಅಪರಾಹ್ನ 3:30ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ವಿಸ್ಡಮ್ ಎಜ್ಯುಕೇಶನ್‌ನ ಸ್ಥಾಪಕಿ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಡಾ.ಫ್ರಾನ್ಸಿಸ್ಕಾ ತೇಜ್ ಪಾಲ್ಗೊಳ್ಳುವರು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠಾಧಿಕಾರಿ ವಂ.ಮೆಲ್ವಿನ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

'ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬ ಎರಡು ವಿಭಾಗಗಳಲ್ಲಿ ಉತ್ಸವ ನಡೆಯಲಿದೆ. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳು ಇರಲಿವೆ. ವಿವಿಧ ಕಾಲೇಜುಗಳ 1,500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ, ಪ್ರತೀ ವೈಯಕ್ತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಸ್ತಿ ಪತ್ರ ಮತ್ತು ಫಲಕದೊಂದಿಗೆ ಗೌರವಿಸಲಾಗುವುದು. ಉತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ಫಲಕ ನೀಡಿ ಗೌರವಿಸಲಾಗುವುದು ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿವಿ ಕುಲಸಚಿವ ಡಾ.ಆಲ್ವಿನ್ ಡೇಸಾ, ಡಾ.ಭವ್ಯಾ ಶೆಟ್ಟಿ, ಡಾ.ಸ್ಮಿತಾ ಡಿ.ಕೆ., ಆ್ಯನ್ಸನ್ ರೇಗೊ, ಶ್ರಾವಣಿ ಕೆ. ಭಟ್ ಉಪಸ್ಥಿತರಿದ್ದರು.

*Samyukta Karnataka 22-08-2025*

# ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ ಅಲೋಶಿನ್ ಫೆಸ್ಟ್

## 1500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ

**ಸಂ.ಕ.ಸಮಾಚಾರ, ಮಂಗಳೂರು**

ಸಂತಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ ಅಲೋಶಿನ್ ಫೆಸ್ಟ್ 2025 ಆ.25ರಂದು ನಡೆಯಲಿದೆ.

ಬೆಳಗ್ಗೆ 9ಕ್ಕೆ ಎಲ್ಸಿಆರ್‌ಐ ಬ್ಲಾಕ್‌ನ ಎಲ್‌ಎಫ್ ರಸ್ಕಿನಾ ಸಭಾಂಗಣದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ ಉತ್ಸವ ಉದ್ಘಾಟಿಸುವರು.

ಹಿರಿಯ ವಿದ್ಯಾರ್ಥಿ, ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು. ಎಂದು ವಿವಿ ಕುಲಪತಿ ವಂ.ಡಾ.ಪ್ರವೀಣ್ ಮಾರ್ಟಿಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬ ಎರಡು ವಿಭಾಗಗಳಲ್ಲಿ ಉತ್ಸವ ಆಯೋಜಿಸಲಾಗುವುದು. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳು ನಡೆಯಲಿವೆ. ಕಲಾ ವಿದ್ಯಾರ್ಥಿಗಳಿಗೆ ಚರ್ಚೆ, ಚಿತ್ರಕಲೆ, ಮೊನೊಲಾಗ್, ರಸಪ್ರಶ್ನೆ, ಫ್ಯಾಶನ್ ಶೋ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಮ್ಯಾನೇಜ್ಮೆಂಟ್ ರೊಡೀಸ್, ಬ್ಯುಸಿನೆಸ್ ಮ್ಯಾನೇಜರ್, ಬ್ಯುಸಿನೆಸ್ ರಸಪ್ರಶ್ನೆ, ಶಾರ್ಕ್ ಟ್ಯಾಂಕ್, ಬ್ರ್ಯಾಂಡ್ ಮ್ಯಾಡ್ ಆಡ್, ಬೆಸ್ಟ್ ಆಕೌಂಟೆಂಟ್, ಬೆಸ್ಟ್ ಮ್ಯಾನೇಜ್ಮೆಂಟ್ ಟೀಂ, ಮಾರ್ಕೆಟಿಂಗ್, ಪ್ರಾಡಕ್ಟ್ ಲಾಂಚ್, ಕಾರ್ಪರೇಟ್ ವಾಕ್, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಸೈನ್ಸ್ ರಂಗೋಲಿ, ಸೈನ್ಸ್ ರಸಪ್ರಶ್ನೆ, ದಿ ಸೈನ್ಸ್ ಸ್ಟ್ಯಾಂಡ್ ಪಾಯಿಂಟ್, ಸೈನ್ಸ್ ಪಝಲ್, ಸೈನ್ಸ್ ಎಸ್ಕೇಪ್ ರೂಮ್, ಸೈನ್ಸ್ ಎಕ್ಸಿಬಿಶನ್, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಐಟಿ ಮ್ಯಾನೇಜರ್, ಫೋಟೋ ಆ್ಯಂಡ್ ವಿಡಿಯೋಗ್ರಫಿ, ಗೇಮಿಂಗ್ ಟೈಂ, ಕುಕ್ಕಿಂಗ್ ವಿಥೌಟ್ ಫೈರ್, ರೀಲ್ ಮೇಕಿಂಗ್, ಪೋಸ್ಟರ್ ಮೇಕಿಂಗ್, ಸಾಂಸ್ಕೃತಿಕ ಹಬ್ಬದಲ್ಲಿ ಶಾಸ್ತ್ರೀಯ ನೃತ್ಯ, ಫೇಸ್ ಪೈಂಟಿಂಗ್, ಮೆಹೆಂದಿ, ಕಸದಿಂದ ರಸ ಹಾಗೂ ಸಮೂಹ ನೃತ್ಯ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ವಿವರಿಸಿದರು.

ವಿವಿಧ ಕಾಲೇಜುಗಳ 1500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ, ಪ್ರತಿ ವೈಯಕ್ತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಸ್ತಿ ಪತ್ರ ಮತ್ತು ಫಲಕದೊಂದಿಗೆ ಗೌರವಿಸಲಾಗುವುದು. ಉತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ಫಲಕ ನೀಡಿ ಗೌರವಿಸಲಾಗುವುದು ಎಂದರು. ವಿವಿ ಕುಲಸಚಿವ ಡಾ.ಆಲ್ವಿನ್ ಡೇಸಾ, ಡಾ.ಭವ್ಯಾ ಶೆಟ್ಟಿ, ಡಾ.ಸ್ಮಿತಾ ಡಿ.ಕೆ., ಆ್ಯನ್ಸನ್ ರೇಗೊ, ಶ್ರಾವಣಿ ಕೆ.ಭಟ್ ಉಪಸ್ಥಿತರಿದ್ದರು.

Prajavani 22-08-2025

# ಅಲೋಶಿಯನ್ ಫೆಸ್ಟ್ 25ಕ್ಕೆ

ಮಂಗಳೂರು: ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರ ಮಟ್ಟದ ಪ್ರತಿಭಾ ಉತ್ಸವ 'ಅಲೋಶಿಯನ್ ಫೆಸ್ಟ್ -2025' ಅನ್ನು ಆ.25ರಂದು ಹಮ್ಮಿಕೊಳ್ಳಲಾಗಿದೆ.

ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾಗಿರುವ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ, ಅಂದು ಬೆಳಿಗ್ಗೆ 9 ಗಂಟೆಗೆ ಎಲ್‌ಎಫ್ ರಸ್ಕಿನಾ ಸಭಾಭವನದಲ್ಲಿ ಉತ್ಸವ ಉದ್ಘಾಟಿಸುವರು. ಹಿರಿಯ ವಿದ್ಯಾರ್ಥಿಯಾಗಿರುವ ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು ಎಂದು ವಿವಿ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬ ಎರಡು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳಿವೆ. ಉತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ಫಲಕ ನೀಡಿ ಗೌರವಿಸಲಾಗುವುದು ಎಂದು ಪ್ರಾಧ್ಯಾಪಕಿ ಭವ್ಯಾ ಶೆಟ್ಟಿ ಹೇಳಿದರು.

ಕುಲಸಚಿವ ಅಲ್ವಿನ್ ಡೇಸಾ, ಸ್ಮಿತಾ ಡಿ.ಕೆ., ಅನ್ಸನ್ ರೇಗೊ, ಶ್ರಾವಣಿ ಕೆ. ಭಟ್ ಉಪಸ್ಥಿತರಿದ್ದರು.

Deccan Herald 22-08-2025

# Aloysian Fest 2025 on August 25

MANGALURU, DHNS: The St Aloysius Deemed-to-be-University will organise 'Aloysian Fest 2025', a national-level fest for PU students at the LCRI Hall on the college premises on August 25 at 9 am.

St Aloysius deemed-to-be University vice chancellor Fr Praveen Martis told media-persons at the Patrika Bhavan on Thursday that the fest would be inaugurated by entrepreneur Kanyana Sadashiva Shetty. Actor Raj Deepak Shetty will be the guest of honour.

As many as 31 academic and creative events, including debate, quiz, fashion show, management roadies, brand mad-ads, science exhibition, gaming and coding, will be held.

Around 1,500 students from across India are expected to take part in the fest. The valedictory programme will be held on the same day at 3.30 pm, he said.

*Hosadigantha 23-08-2025*

# ಆ.25: ಒಂದು ದಿನದ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ ಅಲೋಶಿನ್ ಫೆಸ್ಟ್ 2025

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ ಅಲೋಶಿನ್ ಫೆಸ್ಟ್ 2025 ಆ.25ರಂದು ನಡೆಯಲಿದೆ.

ಬೆಳಗ್ಗೆ 9ಕ್ಕೆ ಎಲ್‌ಸಿಆರ್‌ಐ ಬ್ಲಾಕ್‌ನ ಎಲ್‌ಎಫ್ ರಸ್ಕಿನಾ ಸಭಾಂಗಣದಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಉದ್ಯಮಿ ಕನ್ಯಾನ ಸದಾಶಿವ ಶೆಟ್ಟಿ ಉತ್ಸವ ಉದ್ಘಾಟಿಸುವರು.

ಹಿರಿಯ ವಿದ್ಯಾರ್ಥಿ, ಚಿತ್ರನಟ ರಾಜ್ ದೀಪಕ್ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು. ಸಮಾರೋಪ ಸಮಾರಂಭ ಮಧ್ಯಾಹ್ನ 3.30ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ವಿಝ್‌ಡೋಮ್ ಎಜ್ಯುಕೇಶನ್ ಇದರ ಸ್ಥಾಪಕಿ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಡಾ. ಫ್ರಾನ್ಸಿಸ್ಕಾ ತೇಜ್ ಪಾಲ್ಗೊಳ್ಳುವರು. ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ವರಿಷ್ಠಾಧಿಕಾರಿ ವಂ. ಮೆಲ್ವಿನ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸುವರು ಎಂದು ವಿವಿ ಕುಲಪತಿ ವಂ. ಡಾ. ಪ್ರವೀಣ್ ಮಾರ್ಟಿಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹಬ್ಬಗಳ ಹಬ್ಬ' ಹಾಗೂ 'ಸಾಂಸ್ಕೃತಿಕ ಹಬ್ಬ' ಎಂಬ ಎರಡು ವಿಭಾಗಗಳಲ್ಲಿ ಉತ್ಸವ ಆಯೋಜಿಸಲಾಗುವುದು. 'ಹಬ್ಬಗಳ ಹಬ್ಬ'ದಲ್ಲಿ ಒಟ್ಟು 31 ಸ್ಪರ್ಧೆಗಳು ನಡೆಯಲಿವೆ. ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ಏರ್ಪಡಿಸಲಾಗಿದೆ. ಸಾಂಸ್ಕೃತಿಕ ಹಬ್ಬದಲ್ಲಿ ಶಾಸ್ತ್ರೀಯ ನೃತ್ಯ, ಫೇಸ್ ಪೈಂಟಿಂಗ್, ಮೆಹೆಂದಿ, ಕಸದಿಂದ ರಸ ಹಾಗೂ ಸಮೂಹ ನೃತ್ಯ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದರು.

ವಿವಿಧ ಕಾಲೇಜುಗಳ 1500 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ, ಪ್ರತಿ ವೈಯಕ್ತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಸ್ತಿ ಪತ್ರ ಮತ್ತು ಫಲಕದೊಂದಿಗೆ ಗೌರವಿಸಲಾಗುವುದು. ಉತ್ತಮ ಪ್ರದರ್ಶನ ನೀಡಿದ ಕಾಲೇಜು ತಂಡಕ್ಕೆ ಸಮಗ್ರ ಫಲಕ ನೀಡಿ ಗೌರವಿಸಲಾಗುವುದು ಎಂದರು.

ವಿವಿ ಕುಲಸಚಿವ ಡಾ. ಆಲ್ವಿನ್ ಡೇಸಾ, ಡಾ. ಧವ್ಯಾ ಶೆಟ್ಟಿ, ಡಾ. ಸ್ಮಿತಾ ಡಿ.ಕೆ., ಆ್ಯನ್ಸನ್ ರೇಗೊ, ಶ್ರಾವಣ ಕೆ. ಭಟ್ ಉಪಸ್ಥಿತರಿದ್ದರು.

*Indian Express 26-08-2025*

# ST. ALOYSIUS HOSTS NATIONAL LEVEL FEST FOR PU STUDENTS

**EXPRESS NEWS SERVICE**
@ Mangaluru




Dr. Kanyana Sadashiva Shetty, an alumnus of the university, addressing at the event

St. Aloysius (Deemed to-be University) hosted a national-level fest for pre-university students on Monday at the LF Rasquinha Hall, LCRI Block, drawing over 2,200 participants from 64 colleges across Karnataka and neighbouring states.

The fest was inaugurated by Dr. Kanyana Sadashiva Shetty, an alumnus of the university, an entrepreneur, and an industrialist. In his address, he praised the university's commitment to holistic education, and the students were urged to balance academics with active participation in campus events. He emphasised the importance of morality, a value he said was instilled in him during his time at Aloysius and continues to guide his personal and professional life.

Indian film actor and fellow alumnus Raj Deepak Shetty, who was the Guest of Honour, was felicitated by the university. In his address, he described St. Aloysius as a magical place that nurtured his growth from a backbencher to a successful artist.

Presiding over the event, Dr. Praveen Martis SJ, Vice-Chancellor of the university, quoted Dr. A.P.J. Abdul Kalam's phrase, "FAIL - First Attempt in Learning." He urged students to embrace challenges and give their best in every endeavour.

The fest also recognised outstanding individuals for their achievements in diverse fields.

Udayavani 26-08-2025

# ಶಿಕ್ಷಣದ ಜತೆ ಉದ್ಯಮಶೀಲತೆ, ನಾಯಕತ್ವ ಗುಣ ಅಗತ್ಯ

## ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವದಲ್ಲಿ ಕನ್ಯಾನ ಸದಾಶಿವ ಶೆಟ್ಟಿ




**ಕೊಡಿಯಾಲಬೈಲು, ಆ. 25:** ಸಂತ ಅಲೋಶಿಯಸ್ ವಿಶ್ವವಿದ್ಯಾಲಯದಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಒಂದು ದಿನದ ರಾಷ್ಟ್ರೀಯ ಮಟ್ಟದ ಪ್ರತಿಭಾ ಉತ್ಸವ 'ಅಲೋಶಿಯನ್ ಫೆಸ್ಟ್ 2025'ರ ಉದ್ಘಾಟನ ಸಮಾರಂಭವು ಎಲ್.ಸಿ.ಆರ್.ಐ. ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಸಂಸ್ಥೆಯ ಹಿರಿಯ ವಿದ್ಯಾರ್ಥಿ ಹಾಗೂ ಉದ್ಯಮಿ ಡಾ| ಕನ್ಯಾನ ಸದಾಶಿವ ಶೆಟ್ಟಿ ಉದ್ಘಾಟಿಸಿದರು. ಸಂತ ಅಲೋಶಿಯಸ್ ನನ್ನ ಸ್ವಂತ ಸಂಸ್ಥೆ ಎಂದು ಹೇಳಿಕೊಳ್ಳಲು ನನಗೆ ಅಪಾರ ಹೆಮ್ಮೆಯಿದೆ. ಅಲೋಶಿಯಸ್‌ನಲ್ಲಿ ಅಧ್ಯಯನ ಮಾಡಿದವರು ಕೇವಲ ಶೈಕ್ಷಣಿಕ ಶಿಕ್ಷಣ ಮಾತ್ರವಲ್ಲದೆ ಅದರೊಂದಿಗೆ ಉದ್ಯಮಶೀಲತೆ, ನಾಯಕತ್ವದಲ್ಲೂ ಶ್ರೇಷ್ಠರು. ಸಂತ ಅಲೋಶಿಯಸ್ ಸದಾ ಸಮಗ್ರ ಶಿಕ್ಷಣವನ್ನು ಒದಗಿಸುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ ವಿವಿಯ ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಎಸ್.ಜೆ. ಮಾತನಾಡಿ, ಯಶಸ್ಸು ಎಂಬುವುದು ಇಚ್ಛೆ ಮತ್ತು ಕಾರ್ಯದ ಸಮ್ಮಿಲನವಾಗಿದೆ. ಸೋಲು ಎಂಬುವುದು ಜೀವನದ ಅವಿಭಾಜ್ಯ ಅಂಗ. ಮೊದಲ ಪ್ರಯತ್ನದಲ್ಲಿ ನಾವು ನಮ್ಮ ಗುರಿ ತಲುಪದೇ ಇದ್ದಾಗ ಅದು ನಮ್ಮ ಕೊನೆಯ ನಿರ್ಣಯವೆಂದು ಅಂದುಕೊಳ್ಳದೆ ಮುಂದಿನ ಪ್ರಯತ್ನದಲ್ಲಿ ಭಾಗಿಯಾಗಿ ಯಶಸ್ಸನ್ನು ಕಾಣುವಲ್ಲಿ ತಲ್ಲೀನರಾಗಬೇಕು ಎಂದರು.

ಇತ್ತೀಚೆಗೆ ಅತಿ ಉದ್ದನೆಯ ಎಕ್ಸ್‌ಪ್ಲೋಷನ್ ಗಿಫ್ಟ್ ಬಾಕ್ಸ್ ತಯಾರಿಸುವ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ನಿರ್ಮಿಸಿದ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕಿ ಅಪೇಕ್ಷಾ ಕೊಟ್ಯಾರಿ, ಭರತನಾಟ್ಯದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸೃಷ್ಟಿಸಿದ ತೃತೀಯ ಬಿಎ ವಿದ್ಯಾರ್ಥಿನಿ ರಮೋನಾ ಎವೆಟ್ ಪಿರೇರಾ, ಏಕಕಾಲಕ್ಕೆ ಎರಡೂ ಕೈಗಳಿಂದ ಹತ್ತಕ್ಕೂ ಹೆಚ್ಚು ವಿಭಿನ್ನ ಶೈಲಿಯಲ್ಲಿ ಬರೆಯುವ ಕಲೆ ಹಾಗೂ ಹಲವು ವಿಶ್ವ ದಾಖಲೆ ಬರೆದ ಪ್ರಥಮ ಬಿಎ ವಿದ್ಯಾರ್ಥಿನಿ ಆದಿ ಸ್ವರೂಪ ಇವರ ಪ್ರತಿಭೆಯನ್ನು ಗುರುತಿಸಿ ಸಮ್ಮಾನಿಸಲಾಯಿತು.

ಕುಲಸಚಿವರುಗಳಾದ ಡಾ| ಆಲ್ವಿನ್ ಡೇಸಾ, ಡಾ| ರೊನಾಲ್ಡ್ ನಝರೆತ್, ಸಹ ಸಂಯೋಜಕ ಡಾ| ದಿನೇಶ್ ನಾಯಕ್, ವಿವಿಧ ಉತ್ಸವ ಸಂಯೋಜಕರು, ವಿದ್ಯಾರ್ಥಿ ಸಂಘದ ಅಧ್ಯಕ್ಷ ಆನ್ಸನ್ ರೇಗೋ, ಸಾಂಸ್ಕೃತಿಕ ಕಾರ್ಯದರ್ಶಿ ಶ್ರಾವಣ ಕೆ. ಭಟ್ ಮೊದಲಾದವರು ಉಪಸ್ಥಿತರಿದ್ದರು.

ಸಂಯೋಜಕಿ ಭವ್ಯಾ ಶೆಟ್ಟಿ ಸ್ವಾಗತಿಸಿದರು. ಸಹ ಸಂಯೋಜಕಿ ಡಾ| ಸ್ಮಿತಾ ಡಿ.ಕೆ. ವಂದಿಸಿದರು.

### ಶ್ರಮಪಟ್ಟರೆ ಮಾತ್ರ ಕನಸು ನನಸು

ಚಿತ್ರ ನಟ ರಾಜ್ ದೀಪಕ್ ಶೆಟ್ಟಿ ಮಾತನಾಡಿ, ಸ್ಪರ್ಧೆಗಳು ಯಾವಾಗಲೂ ನಡೆಯುತ್ತಲೇ ಇವೆ. ಆದರೆ ನಾವು ಅವುಗಳಲ್ಲಿ ಪಾಲ್ಗೊಂಡಾಗ ಮಾತ್ರ ನಮ್ಮ ನಿಜವಾದ ಯಶಸ್ಸನ್ನು ಅರಿಯುತ್ತೇವೆ. ಕನಸು ದೊಡ್ಡದಾಗಿರಲಿ ಅಥವಾ ಸಣ್ಣದಾಗಿರಲಿ, ನಾವು ಅದನ್ನು ಸಾಧಿಸುವಲ್ಲಿ ಶ್ರಮಪಟ್ಟರೆ ಮಾತ್ರ ಆ ಕನಸು ನನಸಾಗುತ್ತದೆ ಎಂದರು.

Udayavani 23-08-2025

# ಸೈಬರ್ ಕ್ರೈಂ, ಮಾದಕ ದ್ರವ್ಯ ಸೇವನೆ ಜಾಗೃತಿ ಕಾರ್ಯಾಗಾರ

# ಡ್ರಗ್ಸ್ ವ್ಯಸನದಿಂದ ಯುವಶಕ್ತಿ ನಾಶ: ಡಿಸಿಪಿ ಮಿಥುನ್



**ಮಹಾನಗರ, ಆ. 22:** ಮಕ್ಕಳು ಡ್ರಗ್ಸ್ ವ್ಯಸನಕ್ಕೆ ಬಲಿಯಾಗುತ್ತಿರುವ ಬಗ್ಗೆ ಕೆಲವು ಪೋಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ. ಇದರಿಂದ ಯುವಶಕ್ತಿ ಸಂಪೂರ್ಣ ನಾಶವಾಗುತ್ತದೆ. ಹಾಗಾಗಿ ಡ್ರಗ್ಸ್ ವ್ಯಸನದ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಲು ಪ್ರಯತ್ನ ಅಗತ್ಯ ಎಂದು ಮಂಗಳೂರು ಡಿಸಿಪಿ (ಕಾನೂನು ಸುವ್ಯವಸ್ಥೆ ವಿಭಾಗ) ಮಿಥುನ್ ಎಚ್.ಎನ್. ಹೇಳಿದರು.

ಅವರು ರೋಟರಿ ಕ್ಲಬ್ ಆಫ್ ಮಂಗಳೂರು ಸೆಂಟ್ರಲ್ ಮತ್ತು ರೋಟರ್ಯಾಕ್ಟ್ ಕ್ಲಬ್ ಆಫ್ ಸಂತ ಅಲೋಶಿಯಸ್ ವತಿಯಿಂದ ಮಂಗಳೂರು ಸಂತ ಅಲೋಶಿಯಸ್ ಕಾಲೇಜಿನಲ್ಲಿ ನಡೆದ ಸೈಬರ್ ಕ್ರೈಂ ಮತ್ತು ಮಾದಕ ದ್ರವ್ಯ ಸೇವನೆಯ ಬಗ್ಗೆ ಮಾಹಿತಿ ಮತ್ತು ಜಾಗೃತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಡ್ರಗ್ಸ್ ಮಾಹಿತಿ ನೀಡಲು ಕ್ಯೂ ಆರ್ ಕೋಡ್‌ಗಳನ್ನು ಶಾಲೆ ಕಾಲೇಜುಗಳಿಗೆ ನೀಡಲಾಗಿದೆ. ಅದರ ಪ್ರಯೋಜನ ಎಲ್ಲರೂ ಪಡೆದುಕೊಳ್ಳಬೇಕು. ಯುವಜನತೆ ಡ್ರಗ್ಸ್‌ನಿಂದ ದೂರವಿದ್ದು ಉಜ್ವಲ ಭವಿಷ್ಯ ರೂಪಿಸಿಕೊಳ್ಳುವಂತೆ ಸೂಚಿಸಿದರು.

ನಿಟ್ಟೆ ವಿದ್ಯಾಸಂಸ್ಥೆಯ ಫೋರೆನ್ಸಿಕ್ ವಿಭಾಗದ ಪ್ರೊ| ಡಾ| ಮಹಾಬಲೇಶ್ ಶೆಟ್ಟಿ ಮಾತನಾಡಿ, ಡ್ರಗ್ಸ್ ಮಾಫಿಯಾ ಸರಕಾರವನ್ನೇ ಬದಲಾಯಿಸುವಷ್ಟೇ ಬಲಿಷ್ಠವಾಗಿದೆ. ಭಾರತದ ಜನಸಂಖ್ಯೆಯ ಶೇ.45ರಷ್ಟು ಮಂದಿ 25 ವರ್ಷ ಪ್ರಾಯದ ಒಳಗಿನವರಾಗಿದ್ದು, ಯುವ ಜನತೆ ಕೇಂದ್ರೀಕರಿಸಿ ಡ್ರಗ್ಸ್ ಮಾಫಿಯಾ ಭಾರತವನ್ನು ಟಾರ್ಗೆಟ್ ಮಾಡುತ್ತಿದೆ. ಸೇವನೆಯಿಂದ ನೆನಪಿನ ಶಕ್ತಿ, ಬೌದ್ಧಿಕ ಬೆಳವಣಿಗೆಯ ಕುಸಿತಕ್ಕೆ ಕಾರಣವಾಗುತ್ತದೆ. ಡ್ರಗ್ಸ್‌ನಲ್ಲಿ ಕಾನೂನು ಸಮ್ಮತ ಹಾಗೂ ನಿಷೇಧಿತ ಡ್ರಗ್ಸ್‌ಗಳೆಂದು 2 ವಿಧಗಳಿವೆ. ಆದರೆ ಕಾನೂನು ಸಮ್ಮತ ಡ್ರಗ್ಸ್‌ಗಳೇ ನಿಷೇಧಿತ ಡ್ರಗ್ಸ್ ಸೇವನೆಗೆ ಕಾರಣವಾಗುತ್ತದೆ ಎಂದರು.

ಮಂಗಳೂರು ಸಹಾಯಕ ಪೊಲೀಸ್ ಆಯುಕ್ತೆ (ಸಂಚಾರ) ನಜ್ಮಾ ಫಾರೂಕಿ ಸೈಬರ್ ಅಪರಾಧದ ಬಗ್ಗೆ ಮಹತ್ವದ ಮಾಹಿತಿಗಳನ್ನು ನೀಡಿದರು.

ಅಲೋಶಿಯಸ್ ವಿ.ವಿ. ಸಹ ಕುಲಪತಿ ವಂ| ಮೆಲ್ವಿನ್ ಡಿಕುನ್ಹ, ರೋಟರಿ ಸೆಂಟ್ರಲ್‌ನ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ಕಾರ್ಯದರ್ಶಿ ವಿಕಾಸ್ ಕೋಟ್ಯಾನ್, ಝೋನಲ್ ಲೆಫ್ಟಿನೆಂಟ್ ರವಿ ಜಲನ್, ಯೂತ್ ಸರ್ವಿಸ್ ಡೈರೆಕ್ಟರ್ ಜಾಕ್ಸನ್ ಸಲ್ದಾನ, ಗೀತಾ ಬಿ. ರೈ, ನಾಗೇಂದ್ರ, ರೋಟರ್ಯಾಕ್ಟ್ ಕ್ಲಬ್‌ನ ಅಧ್ಯಕ್ಷೆ ಜಾಹ್ನವಿ ಕೋಟ್ಯಾನ್, ಉಪನ್ಯಾಸಕರು, ಸಿಬಂದಿ ಉಪಸ್ಥಿತರಿದ್ದರು. ಮಾದಕ ದ್ರವ್ಯ ನಿಯಂತ್ರಣ ದಳದ ಸಂಯೋಜಕಿ ಝೀನಾ ಫ್ಲಾವಿಯಾ ಡಿ'ಸೋಜಾ ವಂದಿಸಿದರು. ಶೆಲ್ಡನ್ ಕ್ರಾಸ್ತಾ ನಿರೂಪಿಸಿದರು.

*Hosadigantha 24-08-2025*

# ಅಲೋಶಿಯಸ್‌ನಲ್ಲಿ ಮಾದಕ ದ್ರವ್ಯ ಜಾಗೃತಿ ಕಾರ್ಯಾಗಾರ




**ಮಂಗಳೂರು:** ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಮತ್ತು ರೋಟರ್ಯಾಕ್ಟ್ ಕ್ಲಬ್ ಆಫ್ ಸೈಂಟ್ ಅಲೋಶಿಯಸ್ ವತಿಯಿಂದ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಸೈಬರ್ ಕ್ರೈಂ ಮತ್ತು ಮಾದಕ ದ್ರವ್ಯದ ಬಗ್ಗೆ ಜಾಗತಿ ಕಾರ್ಯಕ್ರಮ ಗುರುವಾರ ನಡೆಯಿತು.

ಡಿಸಿಪಿ ಮಿಥುನ್ ಎಚ್.ಎನ್. ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡುಮಾತನಾಡಿ,ಡ್ರಗ್ಸ್‌ವಿರುದ್ಧಜಾಗೃತಿಅತೀಅಗತ್ಯ.ಪೋಷಕರು ಮತ್ತು ಶಿಕ್ಷಕರು ಈ ಬಗ್ಗೆ ಹೆಚ್ಚಿನನಿಗಾ ವಹಿಸಬೇಕು. ಯುವಜನತೆ ದಾರಿತಪ್ಪದಂತೆ ನೋಡಿಕೊಳ್ಳದಂತೆ ನೋಡಿಕೊಳ್ಳಬೇಕು ಎಂದರು.

ಡಾ.ಮಹಾಬಲೇಶ್ ಶೆಟ್ಟಿ ಅವರು ಮಾತನಾಡಿ, ಡ್ರಗ್ಸ್ ಮಾಫಿಯಾ ಸರ್ಕಾರವನ್ನೇ ಬದಲಾಯಿಸುವಷ್ಟು ಬಲಿಷ್ಠವಾಗಿದೆ. ಭಾರತದ ಜನಸಂಖ್ಯೆಯ ಶೇ.45 ರಷ್ಟು ಮಂದಿ 25 ವರ್ಷ ಪ್ರಾಯದೊಳಗಿನ ಯುವಜನರೇ ಆಗಿರುವುದರಿಂದ ಡ್ರಗ್ಸ್ ಮಾಫಿಯಾ ಭಾರತವನ್ನು ಟಾರ್ಗೆಟ್ ಮಾಡುತ್ತಿದೆ. ಇದು ಆತಂಕಕಾರಿ ವಿಷಯ ಎಂದರು.

ಸಹಾಯಕ ಪೊಲೀಸ್ ಆಯುಕ್ತೆ (ಸಂಚಾರ) ನಜ್ಮಾ ಫಾರೂಕಿ, ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ಕಾರ್ಯದರ್ಶಿ ವಿಕಾಸ್ ಕೋಟ್ಯಾನ್, ಮಾದಕ ದ್ರವ್ಯ ನಿಯಂತ್ರಣ ದಳದ ಸಂಯೋಜಕಿ ಝೀನಾ ಫ್ಲಾವಿಯಾ ಡಿ'ಸೋಜಾ, ರೋಟರ್ಯಾಕ್ಟ್ ಕ್ಲಬ್ ಆಫ್ ಸೈಂಟ್ ಅಲೋಶಿಯಸ್ ಅಧ್ಯಕ್ಷೆ ಜಾಹ್ನವಿ ಪ್ರಶಾಂತ್ ಕೋಟ್ಯಾನ್ ಉಪಸ್ಥಿತರಿದ್ದರು.

*Samyukta Karnataka 23-08-2025*

### ಡ್ರಗ್ಸ್ ಮಾಹಿತಿ ನೀಡಲು ಶಾಲೆ ಕಾಲೇಜುಗಳಿಗೆ ಕ್ಯೂಆರ್ ಕೋಡ್ | ಯುವ ಜನತೆಯನ್ನು ಕೇಂದ್ರೀಕರಿಸಿ ಟಾರ್ಗೆಟ್

# 'ಅಮಲು ಪದಾರ್ಥ ದುಷ್ಪರಿಣಾಮದ ಅರಿವು ಮೂಡಿಸಿ'

**ಸಂ.ಕ.ಸಮಾಚಾರ, ಮಂಗಳೂರು**

ಮಕ್ಕಳು ಡ್ರಗ್ಸ್ ವ್ಯಸನಕ್ಕೆ ಬಲಿಯಾಗುತ್ತಿರುವ ಬಗ್ಗೆ ಕೆಲವು ಪೋಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ. ಡ್ರಗ್ಸ್‌ಗೆ ಬಲಿಯಾಗುವುದರಿಂದ ಯುವಶಕ್ತಿ ಸಂಪೂರ್ಣ ನಾಶವಾಗುತ್ತದೆ ಎಂದು ಕಾನೂನು ಮತು ಸುವ್ಯವಸ್ಥೆ ವಿಭಾಗದ ಡಿಸಿಪಿ ಮಿಥುನ್ ಹೆಚ್. ಎನ್. ಹೇಳಿದರು.

ಅವರು ರೋಟರಿ ಕ್ಲಬ್ ಆಫ್ ಮಂಗಳೂರು ಸೆಂಟ್ರಲ್ ಮತ್ತು ರೋಟರ್ಯಾಕ್ಟ್ ಕ್ಲಬ್ ಆಫ್ ಸೈಂಟ್ ಅಲೋಶಿಯಸ್ ವತಿಯಿಂದ ಮಂಗಳೂರು ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಡೆದ ಸೈಬರ್ ಕ್ರೈಂ ಮತ್ತು ಮಾದಕ ದ್ರವ್ಯ ಸೇವನೆಯ ಬಗ್ಗೆ ಮಾಹಿತಿ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಡ್ರಗ್ಸ್ ವ್ಯಸನ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಲು ಪ್ರಯತ್ನ ಅಗತ್ಯವಿದೆ. ಈ ನಿಟ್ಟಿನಲ್ಲಿ ವಿದ್ಯಾಸಂಸ್ಥೆಗಳು, ಪೋಷಕರು, ರೋಟರಿಯಂತಹ ಸಂಘ ಸಂಸ್ಥೆಗಳು, ಸಾರ್ವಜನಿಕರು ಹೆಚ್ಚಿನ ಮುತುವರ್ಜಿ ವಹಿಸಬೇಕಾಗಿದೆ ಎಂದರು.

ಡ್ರಗ್ಸ್ ಮಾಹಿತಿ ನೀಡಲು ಕ್ಯೂಆರ್ ಕೋಡ್‌ಗಳನ್ನು ಶಾಲೆ ಕಾಲೇಜುಗಳಿಗೆ ನೀಡಲಾಗಿದೆ. ಅದರ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಬೇಕು. ಯುವಜನತೆ ಡ್ರಗ್ಸ್‌ಗಳಿಂದ ದೂರವಿದ್ದು ಉಜ್ವಲ ಭವಿಷ್ಯ ರೂಪಿಸಿಕೊಳ್ಳುವಂತೆ ತಿಳಿಸಿದರು.

ನಿಟ್ಟೆ ವಿದ್ಯಾಸಂಸ್ಥೆಯ ಫೊರೆನ್ಸಿಕ್ ವಿಭಾಗದ ಪ್ರೊ.ಡಾ.ಮಹಾಬಲೇಶ ಶೆಟ್ಟಿ ಮಾತನಾಡಿ, ಡ್ರಗ್ಸ್ ಮಾಫಿಯಾ ಸರಕಾರವನ್ನೇ ಬದಲಾಯಿಸುವಷ್ಟು ಬಲಿಷ್ಠವಾಗಿದೆ. ಭಾರತದ ಜನಸಂಖ್ಯೆಯ ಶೇ.45ರಷ್ಟು ಮಂದಿ 25 ವರ್ಷ ಪ್ರಾಯದ ಒಳಗಿನವರಾಗಿದ್ದು, ಯುವ ಜನತೆಯನ್ನು ಕೇಂದ್ರೀಕರಿಸಿ ಡ್ರಗ್ಸ್ ಮಾಫಿಯಾ ಭಾರತವನ್ನು ಟಾರ್ಗೆಟ್ ಮಾಡುತ್ತಿದೆ ಎಂದರು.

ಡ್ರಗ್ಸ್ ಸೇವನೆಯಿಂದ ನೆನಪಿನ ಶಕ್ತಿ, ಬೌದ್ಧಿಕ ಬೆಳವಣಿಗೆಯ ಕುಸಿತಕ್ಕೆ ಕಾರಣವಾಗುತ್ತದೆ. ಡ್ರಗ್ಸ್‌ನಲ್ಲಿ ಕಾನೂನು ಸಮ್ಮತ ಹಾಗೂ ನಿಷೇಧಿತ ಡ್ರಗ್ಸ್‌ಗಳೆಂದು 2 ವಿಧಗಳಿವೆ. ಆದರೆ ಕಾನೂನು ಸಮ್ಮತ ಡ್ರಗ್ಸ್‌ಗಳೇ ನಿಷೇಧಿತ ಡ್ರಗ್ಸ್ ಸೇವನೆಗೆ ಕಾರಣವಾಗುತ್ತದೆ. ನಮ್ಮ ನೆರೆಯ ದೇಶಗಳಾದ ಅಫ್ಘಾನಿಸ್ತಾನ, ಪಾಕಿಸ್ತಾನ, ಇರಾನ್, ಥೈಲ್ಯಾಂಡ್, ಮತ್ತು ಬರ್ಮಾ ದೇಶಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಡ್ರಗ್ಸ್ ಉತ್ಪಾದನೆಯಾಗುತ್ತಿದ್ದು, ಇದು ಭಾರೀ ಹಣ ತರುವ ಉದ್ಯಮವಾಗಿದೆ ಇದರ ದುಷ್ಪರಿಣಾಮ ಯುವಕರ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿದ್ದು ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ ಎಂದರು.




ಮಂಗಳೂರು ಸಹಾಯಕ ಪೊಲೀಸ್ ಆಯುಕ್ತೆ (ಸಂಚಾರ) ನಜ್ಮಾ ಫಾರುಕಿ ಸೈಬರ್ ಅಪರಾಧದ ಬಗ್ಗೆ ಮಹತ್ವದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಜಾಗೃತಿ ಮೂಡಿಸಿದರು. ಸೈಬರ್ ಮತ್ತು ಮಾದಕ ವ್ಯಸನಗಳಿಗೆ ಬಲಿಯಾಗದಿರಲು ಸ್ವಯಂ ನಿಯಂತ್ರಣ ಅಗತ್ಯ. ವಿದ್ಯಾರ್ಥಿಗಳು ಕಲಿಕೆಯ ಸಂದರ್ಭದಲ್ಲಿ ಆಮಿಷಗಳಿಗೆ ಬಲಿಯಾಗದೆ ತಮ್ಮ ಗುರಿಯಿಂದ ವಿಚಲಿತರಾಗದೆ ಸ್ವಯಂ ಶಿಸ್ತಿನ ಪಾಲನೆಯಿಂದ ವ್ಯಸನಗಳಿಂದ ದೂರ ಇರುವಂತೆ ಎಚ್ಚರಿಕೆ ನೀಡಿದರು.

- ಮಕ್ಕಳು ವ್ಯಸನಕ್ಕೆ ಬಲಿಯಾಗುತ್ತಿರುವ ಬಗ್ಗೆ ಕೆಲವು ಪೋಷಕರು ಅಳಲು
- ಡ್ರಗ್ಸ್ ಸೇವನೆಯಿಂದ ನೆನಪಿನ ಶಕ್ತಿ, ಬೌದ್ಧಿಕ ಬೆಳವಣಿಗೆಯ ಕುಸಿತ
- ಸೈಬರ್ ಕ್ರೈಂ ಮತ್ತು ಮಾದಕ ದ್ರವ್ಯ ಸೇವನೆಯ ಬಗ್ಗೆ ಮಾಹಿತಿ

ಸೈಂಟ್ ಅಲೋಶಿಯಸ್ ವಿಶ್ವವಿದ್ಯಾನಿಲಯದ ಪ್ರೊ ಚಾನ್ಸಲರ್ ಫಾ. ಮೆಲ್ವಿನ್ ಡಿಕುನ್ಹ, ರೋಟರಿ ಸೆಂಟ್ರಲ್‌ನ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ಕಾರ್ಯದರ್ಶಿ ವಿಕಾಸ್ ಕೋಟ್ಯಾನ್, ಝೋನಲ್ ಲೆಫ್ಟಿನೆಂಟ್ ರವಿ ಜಲನ್, ಯೂತ್ ಸರ್ವೀಸ್ ಡೈರೆಕ್ಟರ್ ಜಾಕ್ಸನ್ ಸಲ್ದಾನ, ಗೀತಾ ಜಿ.ರೈ, ನಾಗೇಂದ್ರ, ರೋಟರ್ಯಾಕ್ಟ್ ಕ್ಲಬ್‌ನ ಅಧ್ಯಕ್ಷೆ ಜಾಹ್ನವಿ ಕೋಟ್ಯಾನ್ ಹಾಗೂ ಉಪನ್ಯಾಸಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಮಾದಕ ದ್ರವ್ಯ ನಿಯಂತ್ರಣ ದಳದ ಸಂಯೋಜಕಿ ಝೀನಾ ಫ್ಲಾವಿಯಾ ಡಿಸೋಜ ವಂದಿಸಿ, ಶೆಲ್ವಿನ್ ಕ್ರಾಸ್ತಾ ಕಾರ್ಯಕ್ರಮ ನಿರ್ವಹಿಸಿದರು.

Udayavani 26-08-2025

# ಅಲೋಶಿಯಸ್ ವಿ.ವಿ.ಯಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ

# ವಿದ್ಯಾರ್ಥಿಗಳು ಅವಕಾಶ ಸದುಪಯೋಗಿಸಿಕೊಳ್ಳಿ




**ಮಂಗಳೂರು, ಆ. 25:** ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯ ಅಂಗವಾಗಿ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಸ್ಪರ್ಧೆಗಳನ್ನು ನಡೆಸಲಾಗಿತ್ತು.

ಮಣಿಪಾಲ ವಿ.ವಿ. ಪ್ರಾಧ್ಯಾಪಕರಾದ ಡಾ| ಪ್ರಮೋದ್ ಕುಮಾರ್ ಶೆಟ್ಟಿ ಮಾತನಾಡಿ, ಮೂಲವಿಜ್ಞಾನದ ಆವಶ್ಯಕತೆಗಳನ್ನು ಮತ್ತು ವಿಜ್ಞಾನಿಗಳ ಸಹಯೋಗದಿಂದ ಭಾರತ ಕಂಡ ಪ್ರಗತಿಯನ್ನು ವಿವರಿಸಿದರು. ಭಾರತ 75 ವರ್ಷಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಪ್ರಗತಿಯಲ್ಲಿ ವಿಜ್ಞಾನಿಗಳ ಕೊಡುಗೆಗಳನ್ನು ಸ್ಮರಿಸಿದರು. ಮುಂದಿನ ದಿನಗಳಲ್ಲಿ ಬಾಹ್ಯಾಕಾಶ ವಿಜ್ಞಾನದಲ್ಲಿ ಅಗಣಿತ ಅವಕಾಶಗಳು ಹರಿದುಬರಲಿವೆ. ವಿದ್ಯಾರ್ಥಿಗಳು ಈ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳಿದರು.

ಅಲೋಶಿಯಸ್ ವಿವಿಯ ಕುಲಪತಿ ವಂ|ಡಾ| ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿ, ಭಾರತದ ಕನಸುಗಳು ವಿದ್ಯಾರ್ಥಿಗಳಿಗೆ ಕನಸುಗಳಾಗಿ ಪರಿವರ್ತನೆಗೊಂಡಿರುವುದು ಅತ್ಯಂತ ಹೆಮ್ಮೆಯ ವಿಷಯ. ವಿಜ್ಞಾನಿಗಳ ಪ್ರಯತ್ನಗಳು ದೇಶದ ಜನರನ್ನು ಸುರಕ್ಷಿತವಾಗಿರಿಸಿದ್ದು, ಆತ್ಮನಿರ್ಭರತೆಯನ್ನು ಸಾಧಿಸುವಲ್ಲಿ ಸಫಲವಾಗಿದೆ ಎಂದರು.

ಕ್ಸೇವಿಯರ್ ಬ್ಲಾಕಿನ ನಿರ್ದೇಶಕ ಡಾ| ಈಶ್ವರ ಭಟ್ ಮಾತನಾಡಿ, ಬಾಹ್ಯಾಕಾಶ ದಿನದ ಪ್ರಾಮುಖ್ಯ ವಿವರಿಸಿ ಸ್ವಾಗತಿಸಿದರು.

ವಿವಿಯ ಕುಲಸಚಿವರಾದ ಡಾ| ರೊನಾಲ್ಡ್ ನಜರೆತ್, ವಿಜ್ಞಾನ ವಿಭಾಗದ ಡೀನ್ ಡಾ| ಅರುಣಾ ಕಲ್ಲೂರ್, ಭೌತಶಾಸ್ತ್ರ ವಿಭಾಗ ಮುಖ್ಯಸ್ಥ ಡಾ| ನೀಲಕಂಠನ್, ರಿಸರ್ಚ್ ಕೊ-ಆರ್ಡಿನೇಟರ್ ಡಾ| ಚಂದ್ರಶೇಖರ ಶೆಟ್ಟಿ ಟಿ. ಮತ್ತಿತರರು ಉಪಸ್ಥಿತರಿದ್ದರು. ಶರೋಲಿನ್ ನಿರೂಪಿಸಿದರು. ಭೌತಶಾಸ್ತ್ರ ವಿಭಾಗದ ಉಪನ್ಯಾಸಕ ಹರ್ಷಿತ್ ವಂದಿಸಿದರು.

*Times of India 26-08-2025*

# College social media groups turn into noticeboards

Kevin.Mendonsa@timesofindia.com

**Mangaluru:** In today's digital age, the landscape of communication has undergone a seismic shift, transforming the way information is disseminated and consumed.

Now, social media platforms, particularly WhatsApp groups and email, have taken centre-stage, acting as real-time noticeboards for everything from timetables to campus politics.



This evolution was starkly highlighted a few days ago when a fake circular about a rain holiday rapidly spread through an unofficial college WhatsApp group, creating widespread confusion, prompting the administration to seek clarification from govt officials, only to discover it was a baseless rumour.

Colleges in the region said that they adopted digital transformation for quick transmission of important announcements related to the campus ecosystem. These digital groups and communication have become indispensable for their speed and efficiency in information dissemination. However, this shift also brings challenges, particularly concerning regulation and moderation. Who oversees these groups? How is misinformation managed? As colleges grapple with these questions, they are also striving to instil digital discipline alongside their traditional codes of conduct.

Colleges agree that at times the new communication technology is useful for quick communication but also causes rumours to spread. "In order to curb this, we have issued personalised email IDs to all our students. The important communications are shared through email, besides also through official WhatsApp groups. In order to make sure that authentic messages are shared through WhatsApp, we have given power only to faculty and class representatives to post it. Over the years, institutions experienced several mischiefs committed over social media in connection with institutions both by faculty and students," said N Chiplunkar, principal, NMAM Institute of Technology, Karkala. He added that the campus with 7,120 students is in talks with a service provider to adopt more secure communication channels.

Some institutions inform the students about the do's and don'ts of how to use the official communication of the institution at the beginning of the college. One among them is SDM College, Ujire. College principal Vishwanath P said that students are asked to follow communications put up on noticeboards, which are still considered important for announcements besides the use of social media. "They (students) are requested to double-check what is posted on social media after visiting the noticeboard. If there is confusion, they should approach HoDs or their mentors," he explained. There is a separate social media and media policy at St Aloysius (Deemed to be University). If anyone violates it, she or he can even be rusticated.

*Udayavani 26-08-2025*

## ಉಮಾಬಾಯಿ ಕುಂದಾಪುರ; ಸ್ವಾತಂತ್ರ್ಯ ಹೋರಾಟದ ಮಾಸದ ನೆನಪು ಕಾರ್ಯಕ್ರಮ

# ಉಮಾಬಾಯಿ ಅವರ ಹೋರಾಟದ ಬದುಕು ಅದ್ವಿತೀಯ



**ಮಹಾನಗರ, ಆ. 25:** ಜಗತ್ತಿನ ಬೆರಗುಗಳಲ್ಲೊಂದಾದ ಈ ನೆಲದ ಗಾಂಧಿ ನೇತೃತ್ವದ ಅಹಿಂಸಾತ್ಮಕ ಆತ್ಮಸ್ಥೈರ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಧೀಮಂತ ಮಹಿಳೆಯರ ಕ್ರಿಯಾಶೀಲ ಭಾಗೀದಾರಿಕೆಯಿದ್ದರೂ ಅವರಲ್ಲನೇಕರ ಬಗ್ಗೆ ಚರಿತ್ರೆಯ ಪುಟಗಳಲ್ಲಿ ಘೋರಮೌನವಿದೆ. ಹಾಗೆ ಮೌನದ ಮುಸುಕಿಗೆ ಸಿಕ್ಕು ಅಪರಿಚಿತವಾಗಿಯೇ ಉಳಿದವರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂಘಟಕರಲ್ಲೊಬ್ಬರು ಹಾಗೂ ರಾಷ್ಟ್ರೀಯ ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥೆ ಉಮಾಬಾಯಿ ಕುಂದಾಪುರ ಅವರನ್ನು ನಾವು ಅತ್ಯಂತ ಕೃತಜ್ಞತೆ, ಗೌರವದಿಂದಲೇ ನೆನೆಯಬೇಕಾಗಿದೆ ಎಂದು ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ| ಮೋನ ಮೆಂಡೋನ್ಸಾ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ ಸಾಹಿತ್ಯ ವಿಚಾರ ವೇದಿಕೆ ದಕ್ಷಿಣ ಕನ್ನಡವು ರಥಬೀದಿ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ 'ಸ್ವಾತಂತ್ರ್ಯ ಹೋರಾಟದ ಮಾಸದ ನೆನಪು ಉಮಾಬಾಯಿ ಕುಂದಾಪುರ' ಎಂಬ ವಿಷಯದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಹಾಗೂ ಹಿರಿಯಡ್ಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ| ಜಯಪ್ರಕಾಶ್ ಶೆಟ್ಟಿ ಅವರು ಅಕಾಡೆಮಿ ಹಾಗೂ ಚಕೋರ ವೇದಿಕೆಗಳ ಚಟುವಟಿಕೆಗಳ ಸ್ವರೂಪ ಮತ್ತು ಆಶಯಗಳನ್ನು ಪರಿಚಯಿಸಿದರು.

ಪ್ರಾಂಶುಪಾಲ ಪ್ರೊ| ಜಯಕರ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗ ಮುಖ್ಯಸ್ಥೆ ಜ್ಯೋತಿಪ್ರಿಯಾ ಸ್ವಾಗತಿಸಿದರು. ಡಾ| ವಿನೋದ ವಂದಿಸಿದರು. ಚಕೋರ ವೇದಿಕೆಯ ಜಿಲ್ಲಾ ಸಂಚಾಲಕಿ ಪ್ರೊ| ಅಕ್ಷಯ ಶೆಟ್ಟಿ ನಿರೂಪಿಸಿದರು.

*Hosadigantha 27-07-2025*

# ಉಮಾಬಾಯಿ ಕುಂದಾಪುರ ಅವರನ್ನು ನೆನೆಯಬೇಕಿದೆ: ಡಾ.ಮೋನ



**ಮಂಗಳೂರು:** ಮೌನದ ಮುಸುಕಿಗೆ ಸಿಕ್ಕು ಅಪರಿತವಾಗಿಯೇ ಉಳಿದವರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂಘಟಕರಲ್ಲೊಬ್ಬರು ಹಾಗೂ ರಾಷ್ಟ್ರೀಯ ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥೆ ಉಮಾಬಾಯಿ ಕುಂದಾಪುರ ಅವರನ್ನು ನಾವು ಅತ್ಯಂತ ಕೃತಜ್ಞತೆ ಮತ್ತು ಗೌರವದಿಂದಲೇ ನೆನೆಯಬೇಕಾಗಿದೆ ಎಂದು ಸಂತ ಅಲೋಶಿಯಸ್ ವಿವಿ ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ಮೋನ ಮೆಂಡೋನ್ಸಾ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಚಕೋರ ಸಾಹಿತ್ಯ ವಿಚಾರ ವೇದಿಕೆ ದಕ್ಷಿಣ ಕನ್ನಡವು ರಥಬೀದಿ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ 'ಸ್ವಾತಂತ್ರ್ಯ ಹೋರಾಟದ ಮಾಸದ ನೆನಪು ಉಮಾಬಾಯಿ ಕುಂದಾಪುರ' ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿರಿಯಡ್ಕ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಜಯಪ್ರಕಾಶ್ ಶೆಟ್ಟಿ ಅವರು ಅಕಾಡೆಮಿ ಹಾಗೂ ಚಕೋರ ವೇದಿಕೆಗಳ ಚಟುವಟಿಕೆಗಳ ಸ್ವರೂಪ ಮತ್ತು ಆಶಯಗಳನ್ನು ಪರಿಚಯಿಸಿದರು.

ಪ್ರಾಂಶುಪಾಲ ಪ್ರೊ. ಜಯಕರ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗ ಮುಖ್ಯಸ್ಥೆ ಜ್ಯೋತಿಪ್ರಿಯಾ ಸ್ವಾಗತಿಸಿದರು. ಡಾ. ವಿನೋದ ವಂದಿಸಿದರು. ಚಕೋರ ವೇದಿಕೆಯ ಜಿಲ್ಲಾ ಸಂಚಾಲಕಿ ಪ್ರೊ. ಅಕ್ಷಯ ಶೆಟ್ಟಿ ನಿರೂಪಿಸಿದರು.

Udayavani 31-08-2025

## ಮೆಟಿಲ್ಡಾ ವೆರೋನಿಕಾ ಪಾಯ್ಸ್ ಅವರಿಗೆ ಪಿಎಚ್.ಡಿ.



**ಮಹಾನಗರ, ಆ. 31:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಶಾಸ್ತ್ರ ಶಾಲೆಯ ಸಹಾಯಕ ಪ್ರಾಧ್ಯಾಪಿಕೆ ಮೆಟಿಲ್ಡಾ ವೆರೋನಿಕಾ ಪಾಯ್ಸ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಕುಟುಂಬಗಳ ಉಳಿತಾಯ ಮತ್ತು ಹೂಡಿಕೆಗಳ ಮೇಲೆ ಆರ್ಥಿಕ ಸಾಕ್ಷರತೆ ಮತ್ತು ಅದರ ಪರಿಣಾಮ' ಎಂಬ ಮಹಾಪ್ರಬಂಧಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿಯನ್ನು ನೀಡಿ ಗೌರವಿಸಿದೆ. ಅವರು ಮಂಗಳೂರಿನ ವಿಶ್ವವಿದ್ಯಾಲಯ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ| ಅನಸೂಯಾ ರೈ ಅವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮಂಡಿಸಿದ್ದರು. ಮೆಟಿಲ್ಡಾ ಅವರು ಪುಂಜಾಲಕಟ್ಟೆಯ ಪೆರ್ಡೆಯ ಪಾಲ್ ಪೈಸ್, ಸಿಸಿಲಿಯಾ ಲೋಬೋ ಪುತ್ರಿ.

Vijayakarnatka 31-08-2025

## ಮೆಟಿಲ್ಡಾ ವೆರೋನಿಕಾರಿಗೆ ಪಿಎಚ್‌ಡಿ

**ಮಂಗಳೂರು:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವಾಣಿಜ್ಯ, ಹಣಕಾಸು ಮತ್ತು ಲೆಕ್ಕಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮೆಟಿಲ್ಡಾ ವೆರೋನಿಕಾ ಪಾಯಸ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಕುಟುಂಬಗಳ ಉಳಿತಾಯ ಮತ್ತು ಹೂಡಿಕೆಗಳ ಮೇಲೆ ಆರ್ಥಿಕ ಸಾಕ್ಷರತೆ ಮತ್ತು ಅದರ ಪರಿಣಾಮ' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯವು ಪಿಎಚ್‌ಡಿ ನೀಡಿ ಗೌರವಿಸಿದೆ. ಅವರು ಮಂಗಳೂರಿನ ವಿಶ್ವವಿದ್ಯಾಲಯ ಕಾಲೇಜಿನ ವಿಶ್ರಾಂತ ಪ್ರಿನ್ಸಿಪಾಲ್ ಪ್ರೊ. ಅನಸೂಯಾ ರೈ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಅವರು ಪುಂಜಾಲಕಟ್ಟೆ ಪೆರ್ಡೆಯ ಪಾಲ್ ಪಾಯಸ್ ಮತ್ತು ಸಿಸಿಲಿಯಾ ಲೋಬೊ ದಂಪತಿ ಪುತ್ರಿ ಮತ್ತು ಬಜ್ಪೆಯ ಡಾ. ಅಶ್ವಿನ್ ಲಾಯಲ್ ಮೆಂಡೋನ್ಸ ಅವರ ಪತ್ನಿ.



Udyavani 31-08-2025

## ಕೆಟ್ಟ ದಿನವೂ ಅಮೂಲ್ಯವೇ



ಆ ದಿನವೂ ಒಂದು ಸಾಮಾನ್ಯ ಬೆಳಗಿನಂತೆ ಆರಂಭವಾಗಿತ್ತು. ಪುಸ್ತಕಗಳು ಮತ್ತು ಹೊಸ ದಿನದ ಯೋಜನೆಗಳೊಂದಿಗೆ ನಾನು ಕಾಲೇಜಿಗೆ ಸಿದ್ಧಳಾದೆ. ಬಸ್ ನಿಲ್ದಾಣದಲ್ಲಿ ನಿಂತಾಗ, ಇದು ದಿನನಿತ್ಯದ ಸಹಜ ಪ್ರಯಾಣವಾಗಿರಬಹುದು ಎಂದುಕೊಂಡೆ. ಆದರೆ ಪ್ರತಿದಿನವೂ ನಾವು ಎಣಿಸಿದಂತೆಯೇ ಸಾಗುವುದಿಲ್ಲ ಎಂಬುದನ್ನು ಮನದಟ್ಟುಮಾಡಿಕೊಂಡೆ.

ಬಸ್ ಕೊನೆಗೂ ಬಂತು, ನಾನು ಏರಿದೆ. ಆದರೆ, ಕಾಲೇಜಿನ ಸಮಯ ಸಮೀಪಿಸುತ್ತಿರುವ ಆತಂಕ ನನ್ನ ಮನಸ್ಸಿನಲ್ಲಿತ್ತು. ಎಲ್ಲವೂ ಸರಿಯಾಗಿ ಸಾಗುತ್ತಿದೆ ಎಂದುಕೊಂಡಾಗ, ಮಧ್ಯದಲ್ಲಿ ಬಸ್ ನಿಂತಿತು. ಅದರ ಟಯರ್ ಪಂಕ್ಚರ್ ಆಗಿತ್ತು! ಆ ಕ್ಷಣದಲ್ಲಿ ಸಮಯವೇ ನಿಂತಂತಾಯಿತು. ಕೆಲವರು ನಿರಾಶೆಗೊಂಡರೆ, ನಮ್ಮಂತವರು 'ಇವತ್ತೇ ಹೀಗಾಗಬೇಕಾ?' ಎಂದುಕೊಂಡು ಬೇಸರಪಟ್ಟೆವು.

ಎಲ್ಲರೂ ಬಸ್‌ನಿಂದ ಕೆಳಗೆ ಇಳಿದು ಇನ್ನೊಂದು ಬಸ್‌ಗಾಗಿ ಕಾಯತೊಡಗಿದರು. ಆದರೆ ಜನಸಂದಣಿಯಿಂದ ತುಂಬಿದ ನಿಲ್ದಾಣದಲ್ಲಿ ಯಾವುದೇ ಬಸ್ ನಿಲ್ಲಲು ಸಿದ್ಧವಿರಲಿಲ್ಲ. ವಿದ್ಯಾರ್ಥಿಗಳಿಗೂ, ಕಚೇರಿ ಹೋಗುವವರಿಗೂ ಸಹ ಇದು ನಿಜಕ್ಕೂ ಸಹನೆಯ ಪರೀಕ್ಷೆಯಾಗಿತ್ತು. ಕೊನೆಗೆ ಒಂದು ಬಸ್ ನಿಂತಾಗ, ಎಲ್ಲರೂ ಹೇಗಾದರೂ ಒಳಗೆ ನುಗ್ಗಲು ಪ್ರಯತ್ನಿಸಿದರು. ನಾನು ಕೂಡ ತುಂಬ ಕಷ್ಟಪಟ್ಟು ಒಳಗೆ ಹೋದೆ. ಉಸಿರಾಡಲು ಸಹ ಜಾಗ ಇರಲಿಲ್ಲ; ಬಸ್‌ನ ಪ್ರತಿಯೊಂದು ತಿರುವೂ ರೋಲರ್ ಕೋಸ್ಟರ್ ಸವಾರಿಯ ಹಾಗೆ ಅನಿಸುತ್ತಿತ್ತು.

ಅಂತಿಮವಾಗಿ ಸಾಹಸ ಮಾಡಿ ಕಾಲೇಜಿಗೆ ತಲುಪಿದೆ. ಆದರೆ, ನನ್ನ ಅದೃಷ್ಟ ಇನ್ನೊಂದು ತಿರುವು ಉಳಿಸಿಕೊಂಡಿತ್ತು. ನಾನು ಕೇವಲ ಎರಡು ನಿಮಿಷ ತಡವಾಗಿ ಕ್ಲಾಸ್‌ಗೆ ಸೇರಿದೆ. ಆ ದಿನ ಹೊಸ ಉಪನ್ಯಾಸಕರ ಮೊದಲ ತರಗತಿಯಾಗಿತ್ತು. ಆ ಎರಡು ನಿಮಿಷದ ತಡ ನನಗೆ ತುಂಬಾ ಭಾರವಾದಂತೆ ಅನಿಸಿತು.

ನಾನು ಎಲ್ಲವನ್ನೂ ವಿವರಿಸಲು ಪ್ರಯತ್ನಿಸಿದೆ, ಆದರೆ ಅವರು ಒಪ್ಪಲಿಲ್ಲ. ಬದಲಾಗಿ, ತಡವಾದ ಕಾರಣಕ್ಕೆ ಹಾಜರಾತಿ ಬೇಕಿದ್ದರೆ ಒಂದು ಪತ್ರ ಬರೆಯಲು ಹೇಳಿದರು. ಆತಂಕದಿಂದಲೇ, ಆ ದಿನದ ಕಷ್ಟವನ್ನು ವಿವರಿಸಿ ನಾನು ನಿಷ್ಠೆಯಿಂದ ಒಂದು ಪತ್ರ ಬರೆದು ಕೊಟ್ಟೆ. ಕೊನೆಗೆ ಉಪನ್ಯಾಸಕರು ಅದನ್ನು ಒಪ್ಪಿಕೊಂಡರು ಮತ್ತು ಹಾಜರಾತಿ ನೀಡಿದರು.

ಆ ಬೆಳಗಿನ ಗೊಂದಲ, ನಿರಾಶೆ, ಮತ್ತು ಸಣ್ಣ ಗೆಲುವುಗಳೆಲ್ಲ ಸೇರಿ ಒಂದು ಮರೆಯಲಾಗದ ಕಥೆಯಾಯಿತು. ಜೀವನದಲ್ಲಿ ಪ್ರತಿದಿನವೂ ಸಿಗುವ ಸಣ್ಣ ಅನುಭವಗಳು – ತಡವಾದ ಬಸ್ಸುಗಳು, ಕಟ್ಟುನಿಟ್ಟಿನ ಶಿಕ್ಷಕರು ಇವೆಲ್ಲವೂ ನಮ್ಮ ನೆನಪುಗಳನ್ನು ರೂಪಿಸುತ್ತವೆ. ಆ ಕ್ಷಣದಲ್ಲಿ 'ಕೆಟ್ಟ ದಿನ' ಎಂದು ಅನಿಸಿದ ಅನುಭವ, ಅನಂತರ ನಗುವಿನ ನೆನಪಾಗಿ ಉಳಿದುಕೊಳ್ಳುತ್ತದೆ. ಬಹುಶಃ ನಮ್ಮೆಲ್ಲರಲ್ಲೂ ಇಂತಹ ಮೊದಲ ದಿನದ ಒಂದು ಕಥೆ ಇದ್ದೇ ಇರುತ್ತದೆ. ಎಲ್ಲವೂ ನಮ್ಮ ವಿರುದ್ಧ ನಡೆದರೂ, ಕೊನೆಗೆ ನಮ್ಮ ಜೀವನಕ್ಕೆ ಸ್ವಲ್ಪ ಬಣ್ಣ ತುಂಬುವ ಕ್ಷಣಗಳವು. ಏಕೆಂದರೆ, ಇಂತಹ ಪ್ರತಿಕ್ಷಣದ ತಿರುವುಗಳೇ ಸಾಮಾನ್ಯ ಜೀವನವನ್ನು ವಿಶೇಷವಾಗಿಸುತ್ತವೆ. ■



• ಸನ ಮುಬೀನ್ ಶೇಖ್
ಸಂತ ಅಲೋಶಿಯಸ್ ಪರಿಗಣಿತ ವಿವಿ ಮಂಗಳೂರು



ESTD : 1880